सत्यमेव जयते

ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

# ಅಪಾಯಕರ ಯಂತ್ರಗಳ (ವಿನಿಯಮನ) ಅಧಿನಿಯಮ, 1983

**(1983ರ 35)**

**[13ನೇ ಆಗಸ್ಟ್, 2001 ರಂದು ಇದ್ದಂತೆ]**

# THE DANGEROUS MACHINES (REGULATION) ACT, 1983

(35 of 1983)

[As on the 13th August, 2001 ]

ಭಾರತ ಸರ್ಕಾರದ ಪರವಾಗಿ ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ
ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ
2001

## ಮುನ್ನುಡಿ

13.8.2001 ರಂದು ಇದ್ದಂತೆ, ಅಪಾಯಕರ ಯಂತ್ರಗಳ (ವಿನಿಯಮನ) ಅಧಿನಿಯಮ, 1983ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 24-9-2001 ರ ಭಾರತ ರಾಜಪತ್ರದ IXನೇ ಭಾಗದ 1ನೇ ವಿಭಾಗದ 21 ನೇ ಸಂಪುಟದ 1ನೇ ಸಂಖ್ಯೆ ವಿಶೇಷ ಸಂಚಿಕೆಯಲ್ಲಿ 33 ರಿಂದ 44 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಡಾ॥ ಸುಭಾಷ್ ಸಿ.ಜೈನ್,
ಕಾರ್ಯದರ್ಶಿ,
ವಿಧಾಯೀ ಇಲಾಖೆ
ಭಾರತ ಸರ್ಕಾರ

ನವದೆಹಲಿ

## PREFACE

This Edition of The Dangerous Machines (Regulation) Act, 1983, as on the 13-8-2001, contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 21, dated 24-9-2001, on pages 33 to 44.

This Kannada text was published under the authority of the President under Clause (a) of Section 2 of The Authoritative Texts (Central Laws) Act, 1973 and on such publication it became the authoritative text of that Act in Kannada.

**Dr. Subhash C. Jain,**
Secretary,
Legislative Department,
Govt. of India.

# ಅಪಾಯಕರ ಯಂತ್ರಗಳ (ವಿನಿಯಮನ) ಅಧಿನಿಯಮ, 1983

ಪ್ರಕರಣಗಳ ಅನುಕ್ರಮಣಿಕೆ

## ಅಧ್ಯಾಯ - I

### ಪ್ರಾರಂಭಿಕ


ಪ್ರಕರಣಗಳು ಪುಟ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ. 1
2. ಸಂಘದ ನಿಯಂತ್ರಣದ ಯುಕ್ತತೆಯ ಬಗ್ಗೆ ಘೋಷಣೆ. 1
3. ಪರಿಭಾಷೆಗಳು. 1
4. ಈ ಅಧಿನಿಯಮವು ಎಲ್ಲ ಇತರ ಅಧಿನಿಯಮಗಳನ್ನು ಅಧ್ಯಾರೋಹಿಸಿರುವುದು. 3


## ಅಧ್ಯಾಯ - II

### ಅಧಿನಿಯಮದ ಜಾರಿ


5. ನಿಯಂತ್ರಕರ ನೇಮಕ ಮತ್ತು ಪ್ರಕಾರ್ಯಗಳು. 3
6. ಆದೇಶಗಳನ್ನು ಹೊರಡಿಸಲು ನಿಯಂತ್ರಕನ ಅಧಿಕಾರ. 3
7. ಪರಿಶೀಲಕರ ನೇಮಕ. 3
8. ನಿಯಂತ್ರಕ ಮುಂತಾದವರು ಲೋಕ ನೌಕರರಾಗಿರುವುದು. 3


## ಅಧ್ಯಾಯ - III

### ತಯಾರಕರು ಮತ್ತು ವ್ಯಾಪಾರಿಗಳಿಗೆ ಲೈಸೆನ್ಸುಗಳ ನೀಡಿಕೆ, ನವೀಕರಣ ಮತ್ತು ರದ್ದಿಯಾತಿ


9. ತಯಾರಕರು ಮತ್ತು ವ್ಯಾಪಾರಿಗಳಿಗೆ ಲೈಸೆನ್ಸು ನೀಡಿಕೆ. 4
10. ಲೈಸೆನ್ಸುಗಳ ನಿಲಂಬನ ಮತ್ತು ರದ್ದಿಯಾತಿ. 5
11. ತಯಾರಕ ಅಥವಾ ವ್ಯಾಪಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಲೈಸೆನ್ಸಿನ ರದ್ದಿಯಾತಿ. 6
12. ಪಾಲುಗಾರಿಕೆಯ ಬದಲಾವಣೆಯ ಮೇಲೆ ಫರ್ಮಿನ ಲೈಸೆನ್ಸು ಅವಿಧಿಮಾನ್ಯವಾಗಿರುವುದು. 6


## ಅಧ್ಯಾಯ- IV

### ಅಪಾಯಕರ ಯಂತ್ರದ ತಯಾರಕ ಅಥವಾ ವ್ಯಾಪಾರಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು


13. ತಯಾರಕನು, ಅಪಾಯಕರ ಯಂತ್ರದ ಪ್ರತಿಯೊಂದು ಭಾಗವು ನಿಯಮಿಸಿದ ಮಾನಕಗಳಿಗನುಗುಣವಾಗಿದೆಯೆಂದು ಸುನಿಶ್ಚಿತಗೊಳಿಸುವುದು. 6
14. ಪ್ರತಿಯೊಂದು ಅಪಾಯಕರ ಯಂತ್ರದ ಮೇಲೆ ನಿರ್ದಿಷ್ಟಪಡಿಸಬೇಕಾದ ವಿವರಗಳು. 6
15. ಪ್ರತಿ ಅಪಾಯಕರ ಯಂತ್ರದೊಂದಿಗೆ ಚಾಲಕನ ಕೈಪಿಡಿಯನ್ನು ಒದಗಿಸಲು ತಯಾರಕನ ಕರ್ತವ್ಯಗಳು. 6
16. ತಯಾರಕರು ಮತ್ತು ವ್ಯಾಪಾರಿಗಳಿಂದ ಪ್ರಮಾಣಪತ್ರ ಮತ್ತು ಖಾತರಿ. 6
17. ನಷ್ಟಭರ್ತಿಯ ಬಗ್ಗೆ ತಯಾರಕನ ಹೊಣೆಗಾರಿಕೆ. 7
18. ತಯಾರಕರು ಮತ್ತು ವ್ಯಾಪಾರಿಗಳು ದಾಖಲೆಗಳನ್ನು ಇಟ್ಟುಕೊಂಡು ಬರುವುದು. 7


## ಅಧ್ಯಾಯ - V

### ಅಪಾಯಕರ ಯಂತ್ರಗಳ ಬಳಕೆದಾರರ ಕರ್ತವ್ಯಗಳು ಮತ್ತು ಹೊಣೆಗಳು


19. ಬಳಕೆದಾರನು ಪ್ರತಿಯೊಂದು ಅಪಾಯಕರ ಯಂತ್ರವನ್ನು ನೋಂದಾಯಿಸುವುದು. 7
20. ಬಳಕೆದಾರರು ಸುನಿಶ್ಚಿತಗೊಳಿಸಿಕೊಳ್ಳಬೇಕಾದ ವಿಷಯಗಳು. 7
21. ಅಸ್ತಿತ್ವದಲ್ಲಿರುವ ಅಪಾಯಕರ ಯಂತ್ರದ ಮಾರ್ಪಾಟು. 7

22. ನಷ್ಟ ಪರಿಹಾರಕ್ಕಾಗಿ ನಿಯೋಜಕರ ಹೊಣೆಗಾರಿಕೆ. 8

23. ಆಕಸ್ಮಿಕದ ನೋಟೀಸು. 8

24. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳುವ ಬಗ್ಗೆ ನಿಯೋಜಕನ ಕರ್ತವ್ಯ. 8

25. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳಲು ನಿಯೋಜಕನು ಲೋಪಿಸುವುದು ಅಥವಾ ತಪ್ಪಿರುವುದು. 9

ಅಧ್ಯಾಯ - **VI**

ಪರಿವೀಕ್ಷಣೆ, ಶೋಧನೆ ಮತ್ತು ಅಭಿಗ್ರಹಣ

26. ಮರಣ ಅಥವಾ ಕ್ಷತಿ ಉಂಟು ಮಾಡುವ ಯಂತ್ರದ ಪರೀಕ್ಷೆ. 9

27. ದಾಖಲೆಗಳು, ಇತ್ಯಾದಿಗಳ ಪರಿವೀಕ್ಷಣೆ. 9

28. ಪ್ರವೇಶಿಸುವ ಮತ್ತು ಶೋಧಿಸುವ ಅಧಿಕಾರ. 9

29. ಅಭಿಗ್ರಹಣದ ಅಧಿಕಾರ. 9

30. ಶೋಧನೆ ಮತ್ತು ಅಭಿಗ್ರಹಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ ಅನುಸಾರವಾಗಿ ಮಾಡತಕ್ಕುದು. 9

ಅಧ್ಯಾಯ - **VII**

ಅಪರಾಧಗಳು ಮತ್ತು ಅವುಗಳ ಅಧಿವಿಚಾರಣೆ

31. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ. 10

32. ಕಂಪನಿಗಳಿಂದ ಅಪರಾಧಗಳು. 10

33. ಅಪರಾಧಗಳ ಸಂಜ್ಞಾನ ಮತ್ತು ಅಪರಾಧಗಳ ಅಧಿವಿಚಾರಣೆ. 10

ಅಧ್ಯಾಯ - **VIII**

ಸಂಕೀರ್ಣ

34. ಅಪೀಲುಗಳು. 11

35. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ. 11

36. ಕೇಂದ್ರ ಸರ್ಕಾರದ ನಿಯಮಗಳ ರಚನಾಧಿಕಾರ. 11

37. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ. 11

38. ನಿರ್ದೇಶನಗಳನ್ನು ನೀಡುವ ಅಧಿಕಾರ. 12

# ಅಪಾಯಕರ ಯಂತ್ರಗಳ (ವಿನಿಯಮನ) ಅಧಿನಿಯಮ, 1983

## (1983ರ ಅಧಿನಿಯಮ ಸಂಖ್ಯೆ 35)

ಅಪಾಯಕರ ಯಂತ್ರಗಳನ್ನು ಉತ್ಪಾದಿಸುವ ಯಾವುದೇ ಉದ್ಯಮದಲ್ಲಿ ಯಾವುದೇ ಅಂಥ ಯಂತ್ರವನ್ನು ನಡೆಸುವ ಕಾರ್ಮಿಕನ ಕಲ್ಯಾಣವನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ, ಅದರ ಉತ್ಪನ್ನದ ವ್ಯಾಪಾರ ಮತ್ತು ವಾಣಿಜ್ಯ ಮತ್ತು ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಉಪಯೋಗವನ್ನು ವಿನಿಯಮನಗೊಳಿಸಲು ಮತ್ತು ಯಾವುದೇ ಅಂಥ ಯಂತ್ರವನ್ನು ನಡೆಸುವಾಗ ಯಾವನೇ ಕಾರ್ಮಿಕನು ಮರಣ ಹೊಂದಿದ್ದಕ್ಕಾಗಿ ಅಥವಾ ದೈಹಿಕವಾಗಿ ಕ್ಷತಿಯನ್ನು ಅನುಭವಿಸಿದ್ದಕ್ಕಾಗಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತ ನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

### ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಅಪಾಯಕರ ಯಂತ್ರಗಳ (ವಿನಿಯಮನ) ಅಧಿನಿಯಮ, 1983 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಈ ಪ್ರಕರಣ ಮತ್ತು 3ನೇ ಪ್ರಕರಣದ (ಸಿ) ಖಂಡವು ಈ ಕೂಡಲೇ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು, ಒಂದು ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಆ ರಾಜ್ಯದಲ್ಲಿ ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು; ಮತ್ತು ಯಾವುದೇ ರಾಜ್ಯದ ಸಂಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಈ ಅಧಿನಿಯಮದ ಯಾವುದೇ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು, ಆ ರಾಜ್ಯದಲ್ಲಿ ಆ ಉಪಬಂಧದ ಪ್ರಾರಂಭಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕುದು.

2. ಸಂಘದ ನಿಯಂತ್ರಣದ ಯುಕ್ತತೆಯ ಬಗ್ಗೆ ಘೋಷಣೆ:- ಕೃಷಿ ಅಥವಾ ಗ್ರಾಮೀಣ ಕ್ಷೇತ್ರದಲ್ಲಿ ಉಪಯೋಗಿಸಲು ಉದ್ದೇಶಿಸಲಾಗಿರುವ ಮತ್ತು ಅದನ್ನು ನಡೆಸುವ ಸಂದರ್ಭದಲ್ಲಿ ಉಂಟಾಗುವ ಯಾವುದೇ ಆಕಸ್ಮಿಕವು ಅದರ ನಿರ್ವಾಹಕನ ಮರಣ, ಯಾವುದೇ ಅಂಗಾಂಗಚ್ಛೇದ ಅಥವಾ ಇತರ ದೈಹಿಕ ಕ್ಷತಿಯನ್ನುಂಟುಮಾಡಬಹುದಾದ ಸಂಭವವಿರುವ ಯಾವುದೇ ಸ್ವರೂಪದ ಶಕ್ತಿ ಚಾಲಿತ ಒಕ್ಕುಯಂತ್ರ ಅಥವಾ ಯಾವುದೇ ಇತರ ಯಂತ್ರಗಳ ತಯಾರಿಕೆಯಲ್ಲಿ ಅಥವಾ ಉತ್ಪಾದನೆಯಲ್ಲಿ ತೊಡಗಿರುವ ಉದ್ಯಮಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ಯುಕ್ತವಾಗಿದೆಯೆಂದು ಸಂಘವು ಈ ಮೂಲಕ ಘೋಷಿಸಿದೆ.

3. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಗು " ಎಂದರೆ ಹದಿನಾಲ್ಕು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸದಿರುವ ಒಬ್ಬ ವ್ಯಕ್ತಿ;

(ಬಿ) "ನಿಯಂತ್ರಕ" ಎಂದರೆ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ರಾಜ್ಯಸರ್ಕಾರವು ನೇಮಿಸಿದ ವ್ಯಕ್ತಿ, ಮತ್ತು ಈ ಅಧಿನಿಯಮದ ಮೇರೆಗಿನ ಯಾವುದೇ ಅಧಿಕಾರವನ್ನು ಚಲಾಯಿಸಲು 5ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನಿಯಂತ್ರಕನು ಅಧಿಕಾರ ನೀಡಬಹುದಾಗಿರುವ ಪ್ರತಿಯೊಬ್ಬ ಅಡಿಷನಲ್, ಉಪ ಅಥವಾ ಸಹಾಯಕ ನಿಯಂತ್ರಕನನ್ನು ಇದು ಒಳಗೊಳ್ಳುತ್ತದೆ;

(ಸಿ) "ಅಪಾಯಕರ ಯಂತ್ರ" ಎಂದರೆ, ಶಕ್ತಿಚಾಲಿತ ಒಕ್ಕು ಯಂತ್ರ, ಮತ್ತು ಇದರಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಪಾಯಕರ ಯಂತ್ರ ಎಂಬುದಾಗಿ ನಿರ್ದಿಷ್ಟಪಡಿಸಬಹುದಾದಂತೆ, ಕೃಷಿ ಅಥವಾ ಗ್ರಾಮೀಣಕ್ಷೇತ್ರದಲ್ಲಿ ಉಪಯೋಗಿಸಲು ಉದ್ದೇಶಿಸಲಾಗಿರುವ ಮತ್ತು ಅದನ್ನು ನಡೆಸುವ ಸಂದರ್ಭದಲ್ಲಿ ಉಂಟಾಗುವ ಯಾವುದೇ ಆಕಸ್ಮಿಕವು ಅದರ ನಿರ್ವಾಹಕನ ಮರಣ, ಯಾವುದೇ ಅಂಗಚ್ಛೇದ ಅಥವಾ ಇತರ ದೈಹಿಕ ಕ್ಷತಿಯನ್ನು ಉಂಟುಮಾಡಬಹುದಾದ ಸಂಭವವಿರುವ ಯಾವುದೇ ಸ್ವರೂಪದ ಯಾವುದೇ ಯಂತ್ರವನ್ನು ಒಳಗೊಳ್ಳುತ್ತದೆ;

(ಡಿ) "ದಿವಸ" ಎಂದರೆ, ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿ;

(ಇ) ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ "ವ್ಯಾಪಾರಿ" ಎಂದರೆ ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗವನ್ನು ನಗದಿಗೆ ಅಥವಾ ಮುಂದೂಡಿದ ಸಂದಾಯಕ್ಕೆ ಅಥವಾ ದಲ್ಲಾಳಿ, ಸಂಭಾವನೆ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ನೇರವಾಗಿ ಅಥವಾ ಅನ್ಯಥಾ ಖರೀದಿಸುವ, ಮಾರಾಟಮಾಡುವ, ಪೂರೈಕೆ ಮಾಡುವ ಅಥವಾ ವಿತರಣೆ ಮಾಡುವ ವ್ಯವಹಾರವನ್ನು ನಡೆಸುವ ವ್ಯಕ್ತಿ ಅಥವಾ ಫರ್ಮು ಅಥವಾ ಒಂದು ಹಿಂದೂ ಅವಿಭಕ್ತ ಕುಟುಂಬ ಮತ್ತು ಅದರಲ್ಲಿ-

(i) ಯಾವನೇ ಯಜಮಾನನ ಪರವಾಗಿ ಅಂಥ ವ್ಯಾಪಾರವನ್ನು ನಡೆಸುವ ಒಬ್ಬ ಕಮಿಷನ್ ಏಜೆಂಟ್;

(ii) ಯಾವುದೇ ಅಪಾಯಕರ ಯಂತ್ರವನ್ನು ಯಾವನೇ ಬಳಕೆದಾರ, ತಯಾರಕ, ದುರಸ್ತಿದಾರ, ಗ್ರಾಹಕ ಅಥವಾ ಯಾವನೇ ಇತರ ವ್ಯಕ್ತಿಗೆ ಮಾರಾಟ ಮಾಡುವ, ಸರಬರಾಜು ಮಾಡುವ, ವಿತರಣೆ ಮಾಡುವ ಅಥವಾ ಅನ್ಯಥಾ ಬಟವಾಡೆ ಮಾಡುವ ಒಬ್ಬ ಆಮದುಗಾರ

- ಇವರು ಒಳಗೊಳ್ಳುತ್ತಾರೆ,

ಆದರೆ, ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಭಾಗವನ್ನು ಈ ಖಂಡದಲ್ಲಿ ಉಲ್ಲೇಖಿಸಿದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ಪ್ರವರ್ಗಕ್ಕೆ ಮಾರಾಟ ಮಾಡುವ, ಸರಬರಾಜು ಮಾಡುವ, ವಿತರಣೆ ಮಾಡುವ ಅಥವಾ ಅನ್ಯಥಾ ಬಟವಾಡೆ ಮಾಡುವ ತಯಾರಕನನ್ನು ಒಳಗೊಳ್ಳುವುದಿಲ್ಲ.

ವಿವರಣೆ:- ಸಂದೇಹಗಳ ನಿವಾರಣೆಗಾಗಿ, ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗವನ್ನು ವ್ಯಾಪಾರಿಯಲ್ಲದ ಯಾವನೇ ವ್ಯಕ್ತಿಗೆ ಮಾರಾಟ ಮಾಡುವ, ಸರಬರಾಜು ಮಾಡುವ, ವಿತರಣೆ ಮಾಡುವ ಅಥವಾ ಅನ್ಯಥಾ ಬಟವಾಡೆ ಮಾಡುವ ತಯಾರಕನನ್ನು ವ್ಯಾಪಾರಿ ಎಂಬುದಾಗಿ ಭಾವಿಸತಕ್ಕುದೆಂದು ಈ ಮೂಲಕ ಘೋಷಿಸಿದೆ, ಮತ್ತು ತಯಾರಕರಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವ ಅವನ ಹೊಣೆಗಾರಿಕೆಯ ಜೊತೆಗೆ ವ್ಯಾಪಾರಿಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳ ಪಾಲನೆಗೂ ಕೂಡ ಅವನು ಹೊಣೆಯಾಗಿರತಕ್ಕುದು.

(ಎಫ್) ಯಾವುದೇ ಅಪಾಯಕರ ಯಂತ್ರಗಳ ನಿರ್ವಾಹಕನಿಗೆ ಸಂಬಂಧಿಸಿದಂತೆ "ನಿಯೋಜಕ" ಎಂದರೆ, ಅಂಥ ಯಂತ್ರವನ್ನು ನಡೆಸುವುದಕ್ಕಾಗಿ ಯಾವುದೇ ಪರಿಶ್ರಮಧನಕ್ಕೆ ಅಥವಾ ಅನ್ಯಥಾ ಅಂಥ ನಿರ್ವಾಹಕನನ್ನು ಯಾವ ವ್ಯಕ್ತಿಯು ನಿಯೋಜಿಸಿಕೊಳ್ಳುವನೋ ಆ ವ್ಯಕ್ತಿ;

(ಜಿ) ನಿರ್ವಾಹಕನಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ ಅವನ ಹೆಂಡತಿ ಮತ್ತು ಅವಲಂಬಿತ ಮಕ್ಕಳು ಮತ್ತು ಅವಲಂಬಿತ ತಾಯಿ ತಂದೆ ಒಳಗೊಳ್ಳುತ್ತಾರೆ;

(ಎಚ್) "ಪರಿಶೀಲಕ" ಎಂದರೆ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪರಿಶೀಲಕ;

(ಐ) "ಯಂತ್ರ" ಎಂಬುದು ಯಾವುದರ ಮೂಲಕ ಶಕ್ತಿಯನ್ನು ಉತ್ಪಾದನೆ ಮಾಡಲಾಗುವುದೋ, ವರ್ಗಾಯಿಸಲಾಗುವುದೋ, ರವಾನೆ ಮಾಡಲಾಗುವುದೋ ಅಥವಾ ಅಪಾಯಕರ ಯಂತ್ರಗಳಿಗೆ ಅನ್ವಯಿಸಲಾಗುವುದೋ ಅಂಥ ಪ್ರಧಾನ ಚಾಲಕಗಳು, ವಿದ್ಯುತ್ ವಾಹಕ ಯಂತ್ರ ಮತ್ತು ಎಲ್ಲ ಇತರ ಉಪಕರಣಗಳನ್ನು ಒಳಗೊಳ್ಳುತ್ತದೆ;

(ಜೆ) ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ "ತಯಾರಕ" ಎಂದರೆ,-

(i) ಅಂಥ ಅಪಾಯಕರ ಯಂತ್ರ ಅಥವಾ ಅದರ ಭಾಗವನ್ನು ಮಾಡುವ ಅಥವಾ ತಯಾರಿಸುವ,

(ii) ಒಂದು ಅಥವಾ ಹೆಚ್ಚಿನ ಭಾಗಗಳನ್ನು ಮಾಡುವ ಅಥವಾ ತಯಾರಿಸುವ ಮತ್ತು ಅಂಥ ಅಪಾಯಕರ ಯಂತ್ರದ ಇತರ ಭಾಗಗಳನ್ನು ಆರ್ಜಿಸುವ ಮತ್ತು ಅಂತಹ ಭಾಗಗಳನ್ನು ಜೋಡಿಸಿದ ತರುವಾಯ, ಸಂದರ್ಭಾನುಸಾರ, ಅಂತಿಮ ಉತ್ಪನ್ನವನ್ನು ತಾನೆ ಮಾಡಿದ ಅಥವಾ ತಯಾರಿಸಿದ ಉತ್ಪನ್ನವೆಂದು ಕ್ಲೇಮು ಮಾಡುವ,

(iii) ಅಂಥ ಅಪಾಯಕರ ಯಂತ್ರದ ಯಾವುದೇ ಭಾಗವನ್ನು ಮಾಡದಿರುವ ಅಥವಾ ತಯಾರಿಸದಿರುವ, ಆದರೆ ಇತರರು ಮಾಡಿದ ಅಥವಾ ತಯಾರಿಸಿದ ಅದರ ಭಾಗಗಳನ್ನು ಜೋಡಿಸುವ ಮತ್ತು ಸಂದರ್ಭಾನುಸಾರ, ಅಂತಿಮ ಉತ್ಪನ್ನವನ್ನು ತಾನೇ ಮಾಡಿದ ಅಥವಾ ತಯಾರಿಸಿದ ಉತ್ಪನ್ನವೆಂದು ಕ್ಲೇಮು ಮಾಡುವ,

(iv) ಯಾವನೇ ಇತರ ವ್ಯಕ್ತಿಯು ಮಾಡಿದ ಅಥವಾ ತಯಾರಿಸಿದ ಯಾವುದೇ ಸಂಪೂರ್ಣ ಅಪಾಯಕರ ಯಂತ್ರದ ಮೇಲೆ ಅವನ ಅಥವಾ ಅದರ ಸ್ವಂತ ಗುರುತನ್ನು ಹಾಕುವ ಅಥವಾ ಹಾಕುವಂತೆ ಮಾಡುವ ಮತ್ತು ಸಂದರ್ಭಾನುಸಾರ, ಅಂಥ ಉತ್ಪನ್ನವನ್ನು ತಾನೇ ಮಾಡಿದ ಅಥವಾ ತಯಾರಿಸಿದ ಉತ್ಪನ್ನವೆಂದು ಕ್ಲೇಮ ಮಾಡುವ

- ವ್ಯಕ್ತಿ ಅಥವಾ ಫರ್ಮು ಅಥವಾ ಹಿಂದೂ ಅವಿಭಕ್ತ ಕುಟುಂಬ;

(ಕೆ) "ನಿರ್ವಾಹಕ" ಎಂದರೆ, ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗವನ್ನು ನಡೆಸಲು ಅಥವಾ ಚೊಕ್ಕಟಗೊಳಿಸಲು ಅಥವಾ ಯಾವುದೇ ಅಪಾಯಕರ ಯಂತ್ರ ಅಥವಾ ಅದರ ಯಾವುದೇ ಭಾಗವನ್ನು ನಡೆಸುವುದಕ್ಕೆ ಅಥವಾ ಚೊಕ್ಕಟಗೊಳಿಸುವುದಕ್ಕೆ ಪ್ರಾಸಂಗಿಕವಾದ ಅಥವಾ ಸಂಬಂಧಪಟ್ಟ ಯಾವುದೇ ಇತರ ರೀತಿಯ ಕೆಲಸಕ್ಕಾಗಿ ಪರಿಶ್ರಮಧನದ ಮೇಲೆ ಅಥವಾ ಅದಿಲ್ಲದೆ ಪ್ರಧಾನ ನಿಯೋಜಕನ ತಿಳಿವಳಿಕೆಯಿಂದ ಅಥವಾ ತಿಳಿವಳಿಕೆಗೆ ಬಾರದೆ ನಿಯತ ಕೆಲಸಗಾರನಾಗಿ ಅಥವಾ ಆಕಸ್ಮಿಕ ಕೆಲಸಗಾರನಾಗಿ ನೇರವಾಗಿ ಅಥವಾ (ಕಂಟ್ರಾಕ್ಟರನೂ ಸೇರಿ) ಯಾವುದೇ ಏಜನ್ಸಿ ಮೂಲಕ ಅಥವಾ ಮುಖಾಂತರವಾಗಿ ನಿಯೋಜಿತನಾದ ಒಬ್ಬ ವ್ಯಕ್ತಿ;

(ಎಲ್) "ಶಕ್ತಿ" ಎಂದರೆ ವಿದ್ಯುತ್ತಿನ ಅಥವಾ ಯಾಂತ್ರಿಕ ಶಕ್ತಿ ಅಥವಾ ಅಪಾಯಕರ ಯಂತ್ರಕ್ಕೆ ಯಾಂತ್ರಿಕವಾಗಿ ರವಾನೆ ಮಾಡುವ ಇತರ ರೂಪದ ಶಕ್ತಿ;

(ಎಮ್) "ಶಕ್ತಿ ಚಾಲಿತ ಒಕ್ಕುಯಂತ್ರ" ಎಂದರೆ ಒಂದು ಅಥವಾ ಹೆಚ್ಚಿನ ವಿಧದ ಕೃಷಿ ಉತ್ಪನ್ನವನ್ನು ಒಕ್ಕುವುದಕ್ಕಾಗಿ ಶಕ್ತಿಯ ನೆರವಿನಿಂದ ನಡೆಯುವ ಒಂದು ಯಂತ್ರ;

(ಎನ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೆರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಒ) "ಪ್ರಧಾನ ಚಾಲಕ" ಎಂದರೆ ಶಕ್ತಿಯನ್ನು ಉತ್ಪಾದಿಸುವ ಅಥವಾ ಅನ್ಯಥಾ ಅಪಾಯಕರ ಯಂತ್ರಕ್ಕೆ ಶಕ್ತಿಯನ್ನು ಒದಗಿಸುವ ಇಂಜಿನ್ನು, ಮೋಟಾರು ಅಥವಾ ಇತರ ಉಪಕರಣ;

(ಪಿ) "ವಾಹಕ ಯಂತ್ರೋಪಕರಣ" ಎಂದರೆ ಪ್ರಧಾನ ಚಾಲಕದ ಗತಿಯನ್ನು ಯಾವುದರ ಮೂಲಕ ಯಾವುದೇ ಅಪಾಯಕರ ಯಂತ್ರಕ್ಕೆ ರವಾನಿಸಲಾಗುವುದೋ ಅಥವಾ ಅದರಿಂದ ಸ್ವೀಕರಿಸಲಾಗುವುದೋ ಅಂಥ ಯಾವುದೇ ಷಾಫ್ಟ್, ಚಕ್ರ, ಡ್ರಮ್ಮು, ಪುಲ್ಲಿ, ಪುಲ್ಲಿ ವ್ಯವಸ್ಥೆ, ಕಪ್ಲಿಂಗ್, ಕ್ಲಚ್, ಡ್ರೈವಿಂಗ್ ಬೆಲ್ಟ್ ಅಥವಾ ಇತರ ಉಪಕರಣ ಅಥವಾ ಸಾಧನ.

4. ಈ ಅಧಿನಿಯಮವು ಎಲ್ಲ ಇತರ ಅಧಿನಿಯಮಗಳನ್ನು ಅಧ್ಯಾರೋಹಿಸಿರುವುದು:- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಹೊರತಾಗಿ ಇತರ ಯಾವುದೇ ಕಾನೂನಿನಿಂದಾಗಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶದ ನಿಮಿತ್ತ ಪರಿಣಾಮವನ್ನು ಹೊಂದಿರುವ ಯಾವುದೇ ಕರಾರು ಅಥವಾ ಲಿಖಿತ ಪತ್ರದಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದರೂ ಪರಿಣಾಮವನ್ನು ಹೊಂದಿರತಕ್ಕುದು.

## ಅಧ್ಯಾಯ - II

ಅಧಿನಿಯಮದ ಜಾರಿ.

5. ನಿಯಂತ್ರಕರ ನೇಮಕ ಮತ್ತು ಪ್ರಕಾರ್ಯಗಳು:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಒಬ್ಬ ನಿಯಂತ್ರಕನನ್ನು ನೇಮಕ ಮಾಡತಕ್ಕುದು ಮತ್ತು ಅದೇ ಅಥವಾ ತರುವಾಯದ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಅಡಿಷನಲ್, ಉಪ ಅಥವಾ, ಸಹಾಯಕ ನಿಯಂತ್ರಕರನ್ನು ಸಹ ನೇಮಿಸಬಹುದು.

(2) ನಿಯಂತ್ರಕನು, ರಾಜ್ಯ ಸರ್ಕಾರದ ಸಾಮಾನ್ಯ ನಿಯಂತ್ರಣ ಮತ್ತು ನಿರ್ದೇಶನಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(3) ನಿಯಂತ್ರಕನು, (5)ನೇ ಉಪಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ಅವನು ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು ಸಹ ಅವನು ಯೋಗ್ಯನೆಂದು ಭಾವಿಸುವಂಥ ವ್ಯಕ್ತಿಗಳಿಗೆ ಅಧಿಕಾರ ನೀಡಬಹುದು ಮತ್ತು ಬೇರೆ ಬೇರೆ ಅಧಿಕಾರಗಳನ್ನು ಚಲಾಯಿಸಲು ಬೇರೆ ಬೇರೆ ವ್ಯಕ್ತಿಗಳಿಗೆ ಅಧಿಕಾರ ನೀಡಬಹುದು.

(4) ನಿಯಂತ್ರಕನು ನೀಡಿದ ಅಥವಾ ವಿಧಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೊಳಪಟ್ಟು, ಯಾವುವೇ ಅಧಿಕಾರಗಳನ್ನು ಚಲಾಯಿಸಲು ನಿಯಂತ್ರಕನು ಅಧಿಕಾರ ನೀಡಿದ ಯಾವನೇ ವ್ಯಕ್ತಿಯು, ಆ ಅಧಿಕಾರಗಳನ್ನು, ಈ ಅಧಿನಿಯಮದಿಂದ ನೇರವಾಗಿ ಮತ್ತು ಅಧಿಕಾರ ನೀಡಿದ ರೀತಿಯಲ್ಲಿ ಅಲ್ಲದೆ ಅವುಗಳನ್ನು ಪ್ರದಾನ ಮಾಡಲಾಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅದೇ ಪರಿಣಾಮವಾಗುವಂತೆ ಚಲಾಯಿಸಬಹುದು.

(5) ನಿಯಂತ್ರಕನು, ತನಗಿಂತ ಕಡಿಮೆ ದರ್ಜೆಯ ಯಾವನೇ ಅಧಿಕಾರಿಯ-

(ಎ) ಎಲ್ಲ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯವನ್ನು ಸಹ ನಿರ್ವಹಿಸಬಹುದು; ಮತ್ತು

(ಬಿ) ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಮೂಲಕ ಆ ಅಧಿಕಾರಿಗೆ ಪ್ರದತ್ತವಾದ ಎಲ್ಲ ಅಥವಾ ಯಾವುವೆ ಅಧಿಕಾರಗಳನ್ನು ಸಹ ಚಲಾಯಿಸಬಹುದು.

6. ಆದೇಶಗಳನ್ನು ಹೊರಡಿಸಲು ನಿಯಂತ್ರಕನ ಅಧಿಕಾರ:- ನಿಯಂತ್ರಕನು, ಅವನು ಯೋಗ್ಯವೆಂದು ಭಾವಿಸಿದರೆ, ಅವನು ಈ ಅಧಿನಿಯಮದ ಉಪಬಂಧಗಳ ನಿರ್ವಹಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಆದೇಶಗಳನ್ನು ಮಾಡಬಹುದು.

7. ಪರಿಶೀಲಕರ ನೇಮಕ:- (1)ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಪಾಯಕರ ಯಂತ್ರಗಳ ಪರಿಶೀಲನೆ, ಶೋಧನೆ, ಅಭಿಗ್ರಹಣ ಮತ್ತು ಅಂಥ ಯಂತ್ರಗಳಿಗೆ ಸಂಬಂಧಿಸಿದ ತಯಾರಕರ, ವ್ಯಾಪಾರಿಗಳ ಮತ್ತು ಬಳಕೆದಾರರ ದಾಖಲೆಗಳನ್ನು ಪರೀಕ್ಷಿಸುವುದಕ್ಕೆ ಸಂಬಂಧಿಸಿದಂತೆ ಅಧಿನಿಯಮದ ಉಪಬಂಧಗಳ ನಿರ್ವಹಣೆಗಾಗಿ ಅದು ಯೋಗ್ಯವೆಂದು ಭಾವಿಸುವಷ್ಟು ಸಂಖ್ಯೆಯ ಪರಿಶೀಲಕರನ್ನು ನೇಮಕ ಮಾಡಬಹುದು.

(2) ಪ್ರತಿಯೊಬ್ಬ ಪರಿಶೀಲಕನು, ನಿಯಂತ್ರಕನ ಸಾಮಾನ್ಯ ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

8. ನಿಯಂತ್ರಕ ಮುಂತಾದವರು ಲೋಕ ನೌಕರರಾಗಿರುವುದು:- ನಿಯಂತ್ರಕ ಮತ್ತು ಈ ಅಧಿನಿಯಮದ ಮೇರೆಗಿನ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ ಅಥವಾ ನಿಯಂತ್ರಕನು ಅಧಿಕಾರ ನೀಡಿದ ಯಾವನೇ ವ್ಯಕ್ತಿ, ಮತ್ತು ಪ್ರತಿಯೊಬ್ಬ ಪರಿಶೀಲಕ ಇವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥದಲ್ಲಿ ಲೋಕ ನೌಕರರೆಂದು ಭಾವಿಸತಕ್ಕುದು.

## ಅಧ್ಯಾಯ - III

ತಯಾರಕರು ಮತ್ತು ವ್ಯಾಪಾರಿಗಳಿಗೆ ಲೈಸೆನ್ಸುಗಳ ನೀಡಿಕೆ, ನವೀಕರಣ ಮತ್ತು ರದ್ದಿಯಾತಿ.

9. ತಯಾರಕರು ಮತ್ತು ವ್ಯಾಪಾರಿಗಳಿಗೆ ಲೈಸೆನ್ಸು ನೀಡಿಕೆ:- (1) ಈ ಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಉಳಿದು, ಯಾವನೇ ವ್ಯಕ್ತಿಯು, ನಿಯಂತ್ರಕನು ಈ ಬಗ್ಗೆ ಕೊಟ್ಟ ವಿಧಿಮಾನ್ಯ ಲೈಸೆನ್ಸನ್ನು ಅವನು ಧಾರಣಮಾಡಿದ್ದ ಹೊರತು, ಒಬ್ಬ ತಯಾರಕನಾಗಿ ಅಥವಾ ವ್ಯಾಪಾರಿಯಾಗಿ ಯಾವುದೇ ಅಪಾಯಕರ ಯಂತ್ರವನ್ನು ತಯಾರಿಸತಕ್ಕುದಲ್ಲ ಅಥವಾ ಪ್ರಾರಂಭಿಸತಕ್ಕುದಲ್ಲ ಅಥವಾ ವ್ಯಾಪಾರವನ್ನು ನಡೆಸತಕ್ಕುದಲ್ಲ:

ಪರಂತು, ಅಂಥ ವರ್ಗದ ಅಪಾಯಕರ ಯಂತ್ರಗಳ ಸಂಬಂಧದಲ್ಲಿ, ಗೊತ್ತುಪಡಿಸಿದ ದಿವಸದ ನಿಕಟಪೂರ್ವದಲ್ಲಿ ತಯಾರಕ ಅಥವಾ ವ್ಯಾಪಾರಿಯಾಗಿ ಯಾವುದೇ ವರ್ಗದ ಅಪಾಯಕರ ಯಂತ್ರಗಳನ್ನು ತಯಾರಿಸುವುದರಲ್ಲಿ ಅಥವಾ ವ್ಯಾಪಾರವನ್ನು ನಡೆಸುವುದರಲ್ಲಿ ತೊಡಗಿರುವ ವ್ಯಕ್ತಿಯು, ಆ ದಿನಾಂಕದಿಂದ ಒಂದು ತಿಂಗಳ ಅವಧಿವರೆಗೆ ಮತ್ತು ಸದರಿ ಒಂದು ತಿಂಗಳ ಅವಧಿಯೊಳಗೆ ಈ ಪ್ರಕರಣದ ಮೇರೆಗೆ ಅಂಥ ಲೈಸೆನ್ಸಿಗಾಗಿ ಅರ್ಜಿಯನ್ನು ಅವನು ಸಲ್ಲಿಸಿದ್ದರೆ, ಅಂಥ ಅರ್ಜಿಯನ್ನು ವಿಲೇವಾರಿ ಮಾಡುವ ನಿಯಂತ್ರಕನು ಆದೇಶದ ಬಗ್ಗೆ ಅವನಿಗೆ ಸೂಚಿಸುವವರೆಗೆ ಅಂಥ ಲೈಸೆನ್ಸು ಇಲ್ಲದೆ ಅಂಥ ಯಂತ್ರಗಳ ತಯಾರಿಕೆಯನ್ನು ಅಥವಾ ಅಂಥ ವ್ಯಾಪಾರವನ್ನು ಮುಂದುವರೆಸಬಹುದು.

ವಿವರಣೆ:- ಈ ಪರಂತುಕದ ಉದ್ದೇಶಗಳಿಗಾಗಿ, "ಗೊತ್ತುಪಡಿಸಿದ ದಿವಸ" ಎಂದರೆ-

(i) ಶಕ್ತಿ ಚಾಲಿತ ಒಕ್ಕುಯಂತ್ರವಾಗಿರುವ ಅಪಾಯಕರ ಯಂತ್ರಗಳ ವರ್ಗದ ಸಂಬಂಧದಲ್ಲಿ, ಈ ಅಧಿನಿಯಮದ ಪ್ರಾರಂಭದ ದಿನಾಂಕ;

(ii) ಅಪಾಯಕರ ಯಂತ್ರಗಳ ಯಾವುದೇ ಇತರ ವರ್ಗದ ಸಂಬಂಧದಲ್ಲಿ, 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಯಂತ್ರಗಳನ್ನು ಯಾವ ದಿನಾಂಕದಿಂದ ಜಾರಿಗೆ ಬರುವಂತೆ ಅಪಾಯಕರ ಯಂತ್ರಗಳೆಂದು ನಿರ್ದಿಷ್ಟಪಡಿಸಿದೆಯೋ ಆ ದಿನಾಂಕ ಅಥವಾ ಈ ಪ್ರಕರಣವು ಆ ತರುವಾಯದ ದಿನಾಂಕದಿಂದ ಜಾರಿಗೆ ಬಂದಿರುವಂಥ ರಾಜ್ಯದ ಸಂದರ್ಭದಲ್ಲಿ ಅಂಥ ತರುವಾಯದ ದಿನಾಂಕ.

(2) ಈ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸು-

(ಎ) ಐದು ವರ್ಷಗಳ ಅವಧಿಯವರೆಗೆ ವಿಧಿಮಾನ್ಯವಾಗಿರತಕ್ಕುದು;

(ಬಿ) ಅದನ್ನು ಕಾಲ ಕಾಲಕ್ಕೆ ಅಷ್ಟೇ ಅವಧಿಗೆ ನವೀಕರಿಸಬಹುದು; ಮತ್ತು

(ಸಿ) ಅದು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕುದು.

(3) ಯಾವುದೇ ಅಪಾಯಕರ ಯಂತ್ರದ ತಯಾರಿಕೆಯನ್ನು ಪ್ರಾರಂಭಿಸಲು ಅಥವಾ ತಯಾರಕನಾಗಿ ಅಥವಾ ವ್ಯಾಪಾರಿಯಾಗಿ ವ್ಯವಹಾರವನ್ನು ನಡೆಸಲು ಬಯಸುವ ವ್ಯಕ್ತಿಯು, ಲೈಸೆನ್ಸು ನೀಡುವುದಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಐದು ನೂರು ರೂಪಾಯಿಗಳನ್ನು ಮೀರದಂಥ ಫೀಜನ್ನು ಸಂದಾಯ ಮಾಡಿ ಅರ್ಜಿಯನ್ನು ಸಲ್ಲಿಸತಕ್ಕುದು.

(4) ಯಾವುದೇ ಅಪಾಯಕರ ಯಂತ್ರದ ತಯಾರಿಕೆಯನ್ನು ಪ್ರಾರಂಭಿಸಲು ಅಥವಾ ತಯಾರಕನಾಗಿ ಅಥವಾ ವ್ಯಾಪಾರಿಯಾಗಿ ವ್ಯವಹಾರವನ್ನು ನಡೆಸಲು ಲೈಸೆನ್ಸು ನೀಡಿಕೆಯನ್ನು ಕೋರುವ ಯಾವುದೇ ಅರ್ಜಿಯನ್ನು ನಿಯಂತ್ರಕನು, ತಾನು ಯುಕ್ತವೆಂದು ಭಾವಿಸುವ ವಿಚಾರಣೆಯನ್ನು ನಡೆಸಿದ ತರುವಾಯ-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಯಾವುದೇ ಅಪಾಯಕರ ಯಂತ್ರತಯಾರಿಕೆಯ ವ್ಯವಹಾರವನ್ನು ನಡೆಸುವ ತಯಾರಕನ ಸಂದರ್ಭದಲ್ಲಿ, ಅಂಥ ಯಂತ್ರವು 13ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಮಾನಕಗಳನ್ನು ಪಾಲಿಸುವುದೆಂದು; ಮತ್ತು

(ಬಿ) ಅಂಥ ಪ್ರಾರಂಭದ ತರುವಾಯ ತಯಾರಕನಾಗಿ ಅಪಾಯಕರ ಯಂತ್ರದ ವ್ಯವಹಾರವನ್ನು ಪ್ರಾರಂಭಿಸಬಯಸುವ ವ್ಯಕ್ತಿಯ ಸಂದರ್ಭದಲ್ಲಿ, ಆ ಅರ್ಜಿದಾರನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಲಾದ ಮಾನಕಗಳಿಗನುಸಾರವಾಗಿ ಅಂಥ ಯಂತ್ರವನ್ನು ತಯಾರು ಮಾಡುವುದಾಗಿ ಘೋಷಿಸಿದ್ದಾನೆ ಎಂದು

-ತನಗೆ ಮನದಟ್ಟಾದ ಹೊರತು, ಮಂಜೂರು ಮಾಡತಕ್ಕುದಲ್ಲ.

(5) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸಿನ ನವೀಕರಣಕ್ಕಾಗಿ ಅರ್ಜಿಯನ್ನು, ಅದರ ವಿಧಿಮಾನ್ಯತೆಯ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ನಲವತ್ತೈದು ದಿವಸಗಳಿಗೆ ಕಡಿಮೆಯಿಲ್ಲದಂತೆ ಸಲ್ಲಿಸತಕ್ಕುದು ಮತ್ತು ನಿಯಮಿಸಬಹುದಾದಂಥ ಎರಡು ನೂರು ರೂಪಾಯಿಗಳನ್ನು ಮೀರದಿರುವಷ್ಟು ಫೀಜನ್ನು ಅದರೊಂದಿಗೆ ಸಂದಾಯ ಮಾಡತಕ್ಕುದು.

(6) ತಯಾರಕನಾಗಿ ಅಪಾಯಕರ ಯಂತ್ರದ ತಯಾರಿಕೆಗಾಗಿ ಅಥವಾ ಅದರ ವ್ಯವಹಾರ ನಡೆಸುವುದಕ್ಕಾಗಿ ಲೈಸೆನ್ಸಿನ ನವೀಕರಣದ ಅರ್ಜಿಯನ್ನು-

(ಎ) ಅಂಥ ಲೈಸೆನ್ಸುಧಾರಕನಿಗೆ, ತನ್ನ ವಾದವನ್ನು ಮಂಡಿಸಲು ಯುಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು; ಮತ್ತು

(ಬಿ) ನಿಯಂತ್ರಕನು-

(i) ಅದಕ್ಕೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ಅಂಥ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು:

ಪರಂತು, ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ಸಲ್ಲಿಸಿದ ಲೈಸೆನ್ಸಿನ ನವೀಕರಣ ಕೋರುವ ಅರ್ಜಿಯನ್ನು, ನಿಯಮಿಸಬಹುದಾದಂಥ ಒಂದು ನೂರು ರೂಪಾಯಿಗಳನ್ನು ಮೀರದ ವಿಳಂಬ ಫೀಜನ್ನು ಸಂದಾಯ ಮಾಡಿದ ತರುವಾಯ ಸ್ವೀಕರಿಸಬಹುದು;

(ii) ಲೈಸೆನ್ಸಿನ ನೀಡಿಕೆ ಅಥವಾ ನವೀಕರಣದ ಸಮಯದಲ್ಲಿ ಅರ್ಜಿದಾರನು ಕೊಟ್ಟ ಯಾವುದೇ ಹೇಳಿಕೆಯು ತಪ್ಪಾಗಿತ್ತೆಂದು ಅಥವಾ ಮುಖ್ಯ ವಿವರಗಳಲ್ಲಿ ಸುಳ್ಳಾಗಿತ್ತೆಂದು;

(iii) ಅರ್ಜಿದಾರನು, ನಿಯಮಿಸಿದ ಮಾನಕಗಳಿಗನುಸಾರವಾಗಿ ಯಾವುದೇ ಅಪಾಯಕರ ಯಂತ್ರ ತಯಾರಿಸುವುದನ್ನು ಬಿಟ್ಟು ಬಿಟ್ಟಿದ್ದಾನೆಂದು ಅಥವಾ ತಪ್ಪಿದ್ದಾನೆಂದು, ಅಥವಾ

(iv) ಅರ್ಜಿದಾರನು, ಲೈಸೆನ್ಸಿನ ಯಾವುದೇ ನಿಬಂಧನೆ ಅಥವಾ ಷರತ್ತನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಉಪಬಂಧವನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಯಾವುದೇ ಅಪಾಯಕರ ಯಂತ್ರವನ್ನು ಭಾರತದ ಒಳಕ್ಕೆ ತರುವುದನ್ನು ಅಥವಾ ಹೊರಗೆ ತೆಗೆದುಕೊಂಡು ಹೋಗುವುದನ್ನು ನಿಷೇಧಿಸುವಷ್ಟು ಮಟ್ಟಿಗೆ ಅಂಥ ಕಾನೂನಿನ ಉಪಬಂಧವನ್ನು ಉಲ್ಲಂಘಿಸಿದ್ದಾನೆಂದು

- ಅವನಿಗೆ ಮನವರಿಕೆಯಾದ ಹೊರತು ತಿರಸ್ಕರಿಸತಕ್ಕುದಲ್ಲ.

(7) ಈ ಪ್ರಕರಣದ ಮೇರೆಗೆ ಯಾರಿಗೆ ಲೈಸೆನ್ಸು ನೀಡಲಾಗಿದೆಯೋ ಅಥವಾ ಯಾರ ಲೈಸೆನ್ಸನ್ನು ನವೀಕರಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳು ಮತ್ತು ಷರತ್ತುಗಳನ್ನು ಮತ್ತು ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸತಕ್ಕುದು.

(8) ಈ ಪ್ರಕರಣದ ಮೇರೆಗೆ ಯಾರಿಗೆ ಲೈಸೆನ್ಸು ನೀಡಲಾಗಿದೆಯೋ ಅಥವಾ ಯಾರ ಲೈಸೆನ್ಸನ್ನು ನವೀಕರಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಅವನು ನಿಯೋಜಿಸಿಕೊಂಡ ಪ್ರತಿಯೊಬ್ಬ ವ್ಯಕ್ತಿಯು ಅಂಥ ನಿಯೋಜನೆಯ ಕ್ರಮದಲ್ಲಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶಗಳ ಉಪಬಂಧಗಳನ್ನು ಪಾಲಿಸುವನೆಂದು ಖಚಿತಪಡಿಸಿಕೊಳ್ಳತಕ್ಕುದು.

(9) ಈ ಪ್ರಕರಣದ ಮೇರೆಗೆ ಲೈಸೆನ್ಸಿನ ನೀಡಿಕೆ ಅಥವಾ ನವೀಕರಣವನ್ನು ಕೋರುವ ಯಾವುದೇ ಅರ್ಜಿಯನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಪ್ರತಿಯೊಂದು ಆದೇಶವನ್ನು ಲಿಖಿತದಲ್ಲಿ ಮಾಡತಕ್ಕುದು.

(10) ಪ್ರತಿಯೊಬ್ಬ ಲೈಸೆನ್ಸು ಪಡೆದ ವ್ಯಾಪಾರಿ ಮತ್ತು ಪ್ರತಿಯೊಬ್ಬ ಲೈಸೆನ್ಸು ಪಡೆದ ತಯಾರಕನು, ತನ್ನ ಲೈಸೆನ್ಸನ್ನು ಅಂಥ ಲೈಸೆನ್ಸು ಪಡೆದ ವ್ಯಾಪಾರಿಯಾಗಿ ಅಥವಾ ತಯಾರಕನಾಗಿ ವ್ಯವಹಾರವನ್ನು ಯಾವ ಆವರಣಗಳಲ್ಲಿ ನಡೆಸುವನೋ ಆ ಆವರಣಗಳ ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕುದು.

10. ಲೈಸೆನ್ಸುಗಳ ನಿಲಂಬನ ಮತ್ತು ರದ್ದಿಯಾತಿ:- (1) ನಿಯಂತ್ರಕನು, 9ನೇ ಪ್ರಕರಣದ ಮೇರೆಗೆ ನೀಡಲಾದಂಥ ಲೈಸೆನ್ಸಿನ ಧಾರಕನು, ಲೈಸೆನ್ಸಿನ ನೀಡಿಕೆ ಅಥವಾ ನವೀಕರಣವನ್ನು ಕೋರುವ ಯಾವುದೇ ಅರ್ಜಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ, ತಪ್ಪಾಗಿರುವ ಅಥವಾ ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವ ಹೇಳಿಕೆಯನ್ನು ನೀಡಿದ್ದಾನೆಂದು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅಥವಾ ಯಾವುದೇ ಅಪಾಯಕರ ಯಂತ್ರವನ್ನು ಭಾರತದೊಳಕ್ಕೆ ತರುವುದನ್ನು ಅಥವಾ ಭಾರತದ ಹೊರಕ್ಕೆ ತೆಗೆದುಕೊಂಡು ಹೋಗುವುದನ್ನು ವಿನಿಯಮಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿದ್ದಾನೆಂದು ನಂಬಲು ನಿಯಂತ್ರಕನಿಗೆ ಯಾವುದೇ ಯುಕ್ತ ಕಾರಣವಿರುವಲ್ಲಿ, ಅವನು, ಸಂದರ್ಭಾನುಸಾರ, ಅಂಥ ತಪ್ಪು ಅಥವಾ ಸುಳ್ಳು ಹೇಳಿಕೆಯನ್ನು ನೀಡಿದ್ದಕ್ಕಾಗಿ ಅಥವಾ ಅಂಥ ಉಲ್ಲಂಘನೆಗಾಗಿ, ಅಂಥ ಲೈಸೆನ್ಸು ಧಾರಕನ ವಿರುದ್ಧ ಯಾವುದೇ ವಿಚಾರಣೆಯು ಅಥವಾ ಅಧಿವಿಚಾರಣೆಯು ಮುಗಿಯುವವರೆಗೆ ಅಂಥ ಲೈಸೆನ್ಸನ್ನು ನಿಲಂಬನಗೊಳಿಸಬಹುದು:

ಪರಂತು, ಅಂಥ ಯಾವುದೇ ಲೈಸೆನ್ಸನ್ನು, ಅದರ ಧಾರಕನಿಗೆ ಉದ್ದೇಶಿತ ಕ್ರಮದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಹತ್ತು ದಿನಗಳನ್ನು ಮೀರುವ ಅವಧಿಗೆ ನಿಲಂಬನಗೊಳಿಸತಕ್ಕುದಲ್ಲ.

(2) ನಿಯಂತ್ರಕನು, ತಾನು ಯುಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಯಾವುದೇ ಲೈಸೆನ್ಸಿನ ಧಾರಕನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಅಂಥ ತಪ್ಪು ಅಥವಾ ಸುಳ್ಳು ಹೇಳಿಕೆಯನ್ನು ನೀಡಿದ್ದಾನೆಂದು ಅಥವಾ ನಿಯಮಿಸಿದ ಮಾನಕಗಳಿಗನುಸಾರವಾಗಿ ಯಾವುದೇ ಅಪಾಯಕಾರಿ ಯಂತ್ರವನ್ನು ತಯಾರಿಸುವುದನ್ನು ಬಿಟ್ಟು ಬಿಟ್ಟಿದ್ದಾನೆ ಅಥವಾ ತಪ್ಪಿದ್ದಾನೆಂದು ಅಥವಾ ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಕಾನೂನು, ನಿಯಮ ಅಥವಾ ಆದೇಶದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಅವನಿಗೆ ಮನವರಿಕೆಯಾದರೆ ಅವನು ಅಂಥ ಲೈಸೆನ್ಸನ್ನು ರದ್ದುಪಡಿಸಬಹುದು:

ಪರಂತು, ಯಾವುದೇ ಲೈಸೆನ್ಸನ್ನು, ಅದರ ಧಾರಕನಿಗೆ ಉದ್ದೇಶಿತ ಕ್ರಮದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ರದ್ದುಪಡಿಸತಕ್ಕುದಲ್ಲ.

(3) ಯಾರ ಲೈಸೆನ್ಸನ್ನು ನಿಲಂಬನಗೊಳಿಸಲಾಗಿದೆಯೋ ಅಥವಾ ರದ್ದುಗೊಳಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನಿಲಂಬನೆ ಅಥವಾ ರದ್ದಿಯಾತಿಯ ತರುವಾಯ ಕೂಡಲೇ ಅಂಥ ಲೈಸೆನ್ಸುದಾರನಾಗಿ ಕಾರ್ಯನಿರ್ವಹಿಸುವುದನ್ನು ನಿಲ್ಲಿಸತಕ್ಕುದು

ಮತ್ತು ಅಂಥ ನಿಲಂಬನೆ ಅಥವಾ ರದ್ದಿಯಾತಿಯ ಆದೇಶವನ್ನು ತೆರವುಗೊಳಿಸುವವರೆಗೆ ಅಂಥ ಲೈಸೆನ್ಸುದಾರನಾಗಿ ವ್ಯವಹಾರವನ್ನು ಪುನಃ ಪ್ರಾರಂಭಿಸತಕ್ಕುದಲ್ಲ.

(4) ನಿಲಂಬನಗೊಳಿಸಿರುವ ಅಥವಾ ರದ್ದುಪಡಿಸಿರುವ ಲೈಸೆನ್ಸನ್ನು ಧಾರಣಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನಿಲಂಬನೆ ಅಥವಾ ರದ್ದಿಯಾತಿಯ ತರುವಾಯ ಕೂಡಲೇ ಅಂಥ ಲೈಸೆನ್ಸನ್ನು ನಿಯಂತ್ರಕನಿಗೆ ಒಪ್ಪಿಸತಕ್ಕುದು.

11. ತಯಾರಕ ಅಥವಾ ವ್ಯಾಪಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಲೈಸೆನ್ಸಿನ ರದ್ದಿಯಾತಿ:- ಯಾವುವೇ ಅಪಾಯಕರ ಯಂತ್ರಗಳ ತಯಾರಕನಾಗಿ ಅಥವಾ ವ್ಯಾಪಾರಿಯಾಗಿ ತಯಾರಿಕೆ ಮಾಡಲು ಅಥವಾ ವ್ಯವಹಾರ ನಡೆಸಲು ಲೈಸೆನ್ಸು ಪಡೆದಿರುವ ವ್ಯಕ್ತಿಯು, ಅಂಥ ತಯಾರಿಕೆ ಅಥವಾ ವ್ಯವಹಾರವನ್ನು ನಿಲ್ಲಿಸಿದರೆ ಅಥವಾ ಅಂಥ ತಯಾರಿಕೆ ಅಥವಾ ವ್ಯವಹಾರವನ್ನು ನಿಲ್ಲಿಸಬಯಸಿದರೆ, ತನ್ನ ಲೈಸೆನ್ಸನ್ನು ರದ್ದುಪಡಿಸುವುದಕ್ಕಾಗಿ ನಿಯಂತ್ರಕನಿಗೆ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಆ ಬಳಿಕ ನಿಯಂತ್ರಕನು ಅಂಥ ಲೈಸೆನ್ಸನ್ನು ರದ್ದುಪಡಿಸಬಹುದು.

12. ಪಾಲುಗಾರಿಕೆಯ ಬದಲಾವಣೆಯ ಮೇಲೆ ಫರ್ಮಿನ ಲೈಸೆನ್ಸು ಅವಿಧಿಮಾನ್ಯವಾಗಿರುವುದು:- ಅಪಾಯಕರ ಯಂತ್ರದ ವ್ಯಾಪಾರಿಯಾಗಿ ಅಥವಾ ತಯಾರಕನಾಗಿ ತಯಾರಿಕೆ ಮಾಡಲು ಅಥವಾ ವ್ಯವಹಾರವನ್ನು ನಡೆಸಲು ಈ ಅಧಿನಿಯಮದ ಮೇರೆಗೆ ಯಾವುದೇ ಫರ್ಮಿಗೆ ಲೈಸೆನ್ಸನ್ನು ನೀಡಲಾಗಿರುವಲ್ಲಿ, ಅಂಥ ಲೈಸೆನ್ಸು, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅಂಥ ಫರ್ಮಿನ ಪಾಲುಗಾರಿಕೆಯಲ್ಲಿ ಉಂಟಾದ ಬದಲಾವಣೆಯನ್ನು ನಿಂಯತ್ರಕನು ಅನುಮೋದಿಸಿದ್ದ ಹೊರತು, ಅಂಥ ಬದಲಾವಣೆಯಾದ ದಿನಾಂಕದಂದು ಮತ್ತು ಅಂದಿನಿಂದ ಅವಿಧಿಮಾನ್ಯವಾಗತಕ್ಕುದು.

## ಅಧ್ಯಾಯ - IV

## ಅಪಾಯಕರ ಯಂತ್ರದ ತಯಾರಕ ಅಥವಾ ವ್ಯಾಪಾರಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.

13. ತಯಾರಕನು, ಅಪಾಯಕರ ಯಂತ್ರದ ಪ್ರತಿಯೊಂದು ಭಾಗವು ನಿಯಮಿಸಿದ ಮಾನಕಗಳಿಗನುಣವಾಗಿದೆಯೆಂದು ಸುನಿಶ್ಚಿತಗೊಳಿಸುವುದು:- (1) ಅಪಾಯಕರ ಯಂತ್ರದ ಪ್ರತಿಯೊಬ್ಬ ತಯಾರಕನು, ಅಂಥ ಯಂತ್ರ ಮತ್ತು ಅದರ ಪ್ರತಿಯೊಂದು ಭಾಗವು ಭಾರತ ಮಾನಕಗಳ ಸಂಸ್ಥೆಯು ಆ ಬಗ್ಗೆ ಗೊತ್ತುಪಡಿಸಿದ ಮಾನಕಗಳಿಗೆ ಅನುಗುಣವಾಗಿರುವಂತೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಮಾನಕಗಳನ್ನು ಪಾಲಿಸುವುದೆಂದು ಸುನಿಶ್ಚಿತಗೊಳಿಸತಕ್ಕುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅಪಾಯಕರ ಯಂತ್ರದ ತಯಾರಕನು ಈ ಕೆಳಕಂಡ ಭಾಗಗಳು ಭದ್ರ ರಚನೆಯ ರಕ್ಷಣೋಪಾಯಗಳಿಂದ ಸುರಕ್ಷಿತವಾಗಿದೆಯೆಂದು ಸುನಿಶ್ಚಿತಗೊಳಿಸತಕ್ಕುದು, ಎಂದರೆ:-

(ಎ) ಪ್ರಧಾನಚಾಲಕ ಮತ್ತು ಅದರ ಪ್ರತಿಯೊಂದು ಭಾಗ;

(ಬಿ ವಿದ್ಯುತ್ತು ವಾಹಕ ಯಂತ್ರ ಮತ್ತು ಅದರ ಪ್ರತಿಯೊಂದು ಭಾಗ;

(ಸಿ) ರೋಲರುಗಳು, ಬ್ಲೋಯರ್‌ಗಳು , ಜರಡಿಗಳು (ಸೀವ್ಸ್), ಎಲಿವೇಟರ್‌ಗಳು ಮತ್ತು ಅದೇ ಬಗೆಯ ಪ್ರತಿಯೊಂದು ಇತರ ಅಪಾಯಕರ ಭಾಗ.

(3) ಅಪಾಯಕರ ಯಂತ್ರದ ಪ್ರತಿಯೊಬ್ಬ ತಯಾರಕನು, ಅಂಥ ಯಂತ್ರಕ್ಕೆ, ಆ ಯಂತ್ರದಲ್ಲಿ ತುತ್ತು ಹಾಕುವ ಉದ್ದೇಶಕ್ಕಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ, ಯಾವುದೇ ಅಂಗಾಂಗವನ್ನು ಯಾವ ಬಿಂದುವಿನ ಆಚೆ ಸೇರಿಸತಕ್ಕುದಲ್ಲವೋ ಆ ಬಿಂದುವನ್ನು ಸೂಚಿಸುವ ಅಪಾಯ ಸಂಕೇತಗಳನ್ನು ಸಹ ಸ್ಪಷ್ಟವಾಗಿ ಮತ್ತು ಓದಲು ಬರುವಂತೆ ಒದಗಿಸತಕ್ಕುದು.

14. ಪ್ರತಿಯೊಂದು ಅಪಾಯಕರ ಯಂತ್ರದ ಮೇಲೆ ನಿರ್ದಿಷ್ಟ ಪಡಿಸಬೇಕಾದ ವಿವರಗಳು:- ತಯಾರಕನು, ಈ ಕೆಳಕಂಡ ವಿವರಗಳನ್ನು ಅಳಿಸಲಾಗದಂಥ ವಿಧಾನದಿಂದ ಪ್ರತಿಯೊಂದು ಅಪಾಯಕರ ಯಂತ್ರದ ಮೇಲೆ ಸ್ಪಷ್ಟವಾಗಿ ಮತ್ತು ಎದ್ದುಕಾಣುವಂತೆ ಗುರುತು ಮಾಡಿದೆ ಅಥವಾ ಕೆತ್ತಲಾಗಿದೆ ಎಂದು ಸುನಿಶ್ಚಿತಗೊಳಿಸತಕ್ಕುದು, ಎಂದರೆ:-

(ಎ) ಸುತ್ತುವ ದಿಕ್ಕು ಮತ್ತು ಪ್ರತಿ ನಿಮಿಷಕ್ಕೆ ಸುತ್ತುವ ಸಂಖ್ಯೆ;

(ಬಿ) ಅದರ ವಿದ್ಯುಚ್ಛಕ್ತಿ ಅಗತ್ಯತೆಗಳು; ಮತ್ತು

(ಸಿ) ತಯಾರಕನ ಹೆಸರು ಮತ್ತು ಸರಿಯಾದ ವಿಳಾಸ, ಅದರ ತಯಾರಿಕೆಯ ವರ್ಷ ಮತ್ತು ತಯಾರಕನ ಲೈಸೆನ್ಸಿನ ದಿನಾಂಕ, ಸಂಖ್ಯೆ ಮತ್ತು ಇತರ ವಿವರಗಳು.

15. ಪ್ರತಿ ಅಪಾಯಕರ ಯಂತ್ರದೊಂದಿಗೆ ಚಾಲಕನ ಕೈಪಿಡಿಯನ್ನು ಒದಗಿಸಲು ತಯಾರಕನ ಕರ್ತವ್ಯಗಳು:- ಪ್ರತಿಯೊಬ್ಬ ತಯಾರಕನು, ಪ್ರತಿಯೊಂದು ಅಪಾಯಕರ ಯಂತ್ರದೊಂದಿಗೆ ಅಂಥ ಯಂತ್ರದ ಚಾಲನೆಗೆ ಸಂಬಂಧಿಸಿದ ಸಾಮಾನ್ಯ ಸೂಚನೆಗಳನ್ನು ಒಳಗೊಂಡ ಕೈಪಿಡಿಯನ್ನು ಒದಗಿಸತಕ್ಕುದು ಮತ್ತು ನಿಯಮಿಸಬಹುದಾದಂಥ ಎಚ್ಚರಿಕೆಗಳನ್ನು ಕೂಡ ಅದರಲ್ಲಿ ಸೇರಿಸಿರತಕ್ಕುದು.

16. ತಯಾರಕರು ಮತ್ತು ವ್ಯಾಪಾರಿಗಳಿಂದ ಪ್ರಮಾಣಪತ್ರ ಮತ್ತು ಖಾತರಿ:- ಯಾವುದೇ ಅಪಾಯಕರ ಯಂತ್ರದ ಸ್ವಾಧೀನವನ್ನು ಮಾರಾಟ, ಗೇಣಿ, ಬಾಡಿಗೆ ಮೂಲಕ ಅಥವಾ ಅನ್ಯಥಾ ವರ್ಗಾವಣೆ ಮಾಡುವುದಕ್ಕೆ ಮುಂಚೆ, ಪ್ರತಿಯೊಬ್ಬ ತಯಾರಕನು ಮತ್ತು ಪ್ರತಿಯೊಬ್ಬ ವ್ಯಾಪಾರಿಯು, ಅಂಥ ಯಂತ್ರದ ಸ್ವಾಧೀನತೆಯನ್ನು ಆರ್ಜಿಸುವ ವ್ಯಕ್ತಿಗೆ, ಆ ಯಂತ್ರವು, ಈ ಅಧಿನಿಯಮದ ಮೂಲಕ

ಅಥವಾ ಅದರ ಮೇರೆಗೆ ವಿಧಿಸಲಾದ ಮಾನಕಗಳಿಗೆ ಅನುಗುಣವಾಗಿರುವುದೆಂದು ಮತ್ತು ಎಲ್ಲಾ ವಿಧದಲ್ಲೂ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸುವುದೆಂದು ಒಂದು ಘೋಷಣಾಪತ್ರವನ್ನು ಕೊಡತಕ್ಕುದು.

17. ನಷ್ಟಭರ್ತಿಯ ಬಗ್ಗೆ ತಯಾರಕನ ಹೊಣೆಗಾರಿಕೆ:- ಯಾವನೇ ವ್ಯಕ್ತಿಯು ಅಪಾಯಕಾರಿ ಯಂತ್ರವನ್ನು ನಡೆಸುವಾಗ-

(i) ಯಂತ್ರದಲ್ಲಿ ಯಾವುದೇ ತಯಾರಿಕಾ ನ್ಯೂನತೆಯ ಕಾರಣದಿಂದ ಮರಣ, ಅಂಗಚ್ಛೇದ ಅಥವಾ ಕ್ಷತಿ ಉಂಟಾಗುವಲ್ಲಿ; ಅಥವಾ

(ii) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸಲು ತಯಾರಕನು ತಪ್ಪಿದ ಕಾರಣದಿಂದ ಉಂಟಾದ

- ಮರಣ ಅಥವಾ ಯಾವುದೇ ಅಂಗಚ್ಛೇದ ಅಥವಾ ಯಾವುದೇ ಇತರ ದೈಹಿಕ ಕ್ಷತಿಯನ್ನು ಅನುಭವಿಸಿದರೆ, ಅಂಥ ತಯಾರಕನು, ಸಂದರ್ಭಾನುಸಾರ, ಅಂಥ ಯಂತ್ರದಿಂದ ಮರಣ ಉಂಟಾದ ವ್ಯಕ್ತಿಯ ಕುಟುಂಬದ ಸದಸ್ಯರಿಗೆ ಈ ಅಧಿನಿಯಮದ ಮೇರೆಗೆ ನಷ್ಟ ಪರಿಹಾರವನ್ನು ಯಾವ ವ್ಯಕ್ತಿಯು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ ಅಥವಾ ಅಂಗಚ್ಛೇದ ಅಥವಾ ದೈಹಿಕ ಕ್ಷತಿಯನ್ನು ಅನುಭವಿಸಿರುವ ವ್ಯಕ್ತಿಗೆ ನಷ್ಟಭರ್ತಿ ಮಾಡುವ ಬಗ್ಗೆ ಹೊಣೆಗಾರನಾಗಿರತಕ್ಕುದು.

18. ತಯಾರಕರು ಮತ್ತು ವ್ಯಾಪಾರಿಗಳು ದಾಖಲೆಗಳನ್ನು ಇಟ್ಟುಕೊಂಡು ಬರುವುದು:- ಪ್ರತಿಯೊಬ್ಬ ತಯಾರಕನು ಮತ್ತು ಪ್ರತಿಯೊಬ್ಬ ವ್ಯಾಪಾರಿಯು, ನಿಯಮಿಸಬಹುದಾದಂಥ ರಿಜಿಸ್ಟರುಗಳು, ದಾಖಲೆಗಳು ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕುದು.

## ಅಧ್ಯಾಯ - V

### ಅಪಾಯಕರ ಯಂತ್ರಗಳ ಬಳಕೆದಾರರ ಕರ್ತವ್ಯಗಳು ಮತ್ತು ಹೊಣೆಗಳು

19. ಬಳಕೆದಾರನು ಪ್ರತಿಯೊಂದು ಅಪಾಯಕರ ಯಂತ್ರವನ್ನು ನೋಂದಾಯಿಸುವುದು:- (1) ಗೇಣಿದಾರನಾಗಿ ಅಥವಾ ಬಾಡಿಗೆದಾರನಾಗಿ ಅಥವಾ ಅನ್ಯಥಾ (ಈ ಅಧಿನಿಯಮದಲ್ಲಿ ಬಳಕೆದಾರನೆಂದು ಉಲ್ಲೇಖಿಸಲಾಗುವ) ಅಪಾಯಕಾರಿ ಯಂತ್ರದ ಒಡೆತನವನ್ನು ಹೊಂದಿರುವ ಅಥವಾ ಅಂಥ ಯಂತ್ರದ ಮೇಲೆ ನಿಯಂತ್ರಣವನ್ನು ಆರ್ಜಿಸುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಯಂತ್ರವನ್ನು ಚಾಲನೆಗೊಳಿಸುವುದಕ್ಕೆ ಮುಂಚೆ ಅಂಥ ಯಂತ್ರದ ನೋಂದಣಿಗಾಗಿ ಐದು ರೂಪಾಯಿಗಳನ್ನು ಮೀರದಂತೆ ನಿಯಮಿಸಬಹುದಾದ ಫೀಜನ್ನು ಸಂದಾಯ ಮಾಡಿ ಅರ್ಜಿಯನ್ನು ನಿಯಂತ್ರಕನಿಗೆ ಸಲ್ಲಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನಿಯಂತ್ರಕನು, ಆ ಯಂತ್ರವು ಎಲ್ಲ ವಿಧದಲ್ಲೂ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸುವುದೆಂದು ಮನದಟ್ಟು ಮಾಡಿಕೊಂಡರೆ, ಅದನ್ನು ನೋಂದಾಯಿಸತಕ್ಕುದು ಮತ್ತು ಅಂಥ ನೋಂದಣಿಯನ್ನು ತೋರಿಸುವ ಒಂದು ಪ್ರಮಾಣಪತ್ರವನ್ನು ಅರ್ಜಿದಾರನಿಗೆ ಕೊಡತಕ್ಕುದು.

(3) ನಿಯಂತ್ರಕನು, ಅವನು ನೋಂದಾಯಿಸಿದ ಅಪಾಯಕರ ಯಂತ್ರಗಳ ವಿವರಗಳು ಮತ್ತು ಯಾರ ಅರ್ಜಿಯ ಮೇಲೆ ಅಂಥ ನೋಂದಣಿಯನ್ನು ಮಾಡಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು, ವಿಳಾಸಗಳು ಮತ್ತು ಇತರ ವಿವರಗಳನ್ನು ಒಳಗೊಳ್ಳುವ ಒಂದು ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕುದು.

(4) ಯಾವುದೇ ಅಪಾಯಕರ ಯಂತ್ರವನ್ನು, ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ನೋಂದಾಯಿಸಿಕೊಳ್ಳುವವರೆಗೆ, ಚಾಲನೆ ಮಾಡತಕ್ಕುದಲ್ಲ.

20. ಬಳಕೆದಾರರು ಸುನಿಶ್ಚಿತಗೊಳಿಸಿಕೊಳ್ಳಬೇಕಾದ ವಿಷಯಗಳು:- ಅಪಾಯಕರ ಯಂತ್ರದ ಪ್ರತಿಯೊಬ್ಬ ಬಳಕೆದಾರನು-

(ಎ) ಅಂಥ ಯಂತ್ರವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಲಾದ ಮಾನಕಗಳಿಗನುಸಾರವಾಗಿದೆ ಎಂದು ಮತ್ತು ಅದು ಎಲ್ಲಾ ವಿಧದಲ್ಲೂ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳನ್ನು ಸಹ ಪಾಲಿಸುವುದೆಂದು;

(ಬಿ) ಅಂಥ ಯಂತ್ರದ ಚಾಲನೆಗೆ ಯಾವನೇ ಚಾಲಕನನ್ನು ನಿಯೋಜಿಸಿಕೊಂಡಿಲ್ಲವೆಂದು; ಮತ್ತು

(ಸಿ) ಯಾವುದೇ ಅಂಥ ಯಂತ್ರವನ್ನು ಚಾಲನೆ ಮಾಡುತ್ತಿರುವಾಗ ಯಾವುದೇ ಕ್ಷತಿಯನ್ನು ಅನುಭವಿಸಬಹುದಾದ ಯಾವನೇ ವ್ಯಕ್ತಿಗೆ ಪ್ರಥಮ ಚಿಕಿತ್ಸೆಯನ್ನು ನೀಡಲು ಸಾಕಷ್ಟು ವ್ಯವಸ್ಥೆಯು ಇದೆಯೆಂದು

- ಸುನಿಶ್ಚಿತಪಡಿಸಿಕೊಳ್ಳತಕ್ಕುದು.

21. ಅಸ್ತಿತ್ವದಲ್ಲಿರುವ ಅಪಾಯಕರ ಯಂತ್ರದ ಮಾರ್ಪಾಟು:- ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಎಲ್ಲಾ ವಿಧದಲ್ಲೂ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸಿಲ್ಲದ ಯಾವುದೇ ಅಪಾಯಕರ ಯಂತ್ರದ ಅಭಿರಕ್ಷೆ ಅಥವಾ ನಿಯಂತ್ರಣವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ, ಅದನ್ನು ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಅಧಿನಿಯಮದ ಪ್ರಾರಂಭದಿಂದ ಒಂದುನೂರ ಎಂಬತ್ತು ದಿವಸಗಳಿಗೆ ಕಡಿಮೆಯಿಲ್ಲದ ಕಾಲದೊಳಗೆ ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ, ಮಾರ್ಪಾಟುಗೊಳಿಸಿಕೊಳ್ಳತಕ್ಕುದು.

(2) ಯಾವುದೇ ಅಂಥ ಯಂತ್ರವನ್ನು, (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮಾರ್ಪಾಟುಗಳನ್ನು ಮಾಡಿದ್ದ ಹೊರತು ಉಪಯೋಗಿಸತಕ್ಕುದಲ್ಲ ಅಥವಾ ಚಾಲನೆಗೊಳಿಸತಕ್ಕುದಲ್ಲ.

22. ನಷ್ಟ ಪರಿಹಾರಕ್ಕಾಗಿ ನಿಯೋಜಕರ ಹೊಣೆಗಾರಿಕೆ:- (1) ಒಂದು ಅಪಾಯಕರ ಯಂತ್ರದ ನಿರ್ವಾಹಕನಾಗಿ, ಅವನ ನಿಯೋಜನೆಯ ಅವಧಿಯಲ್ಲಿ, ಅಂಥ ನಿರ್ವಾಹಕನಿಗೆ ಮರಣ ಅಥವಾ ಯಾವುದೇ ಅಂಗಚ್ಛೇದ ಅಥವಾ ಯಾವುದೇ ಇತರ ದೈಹಿಕ ಕ್ಷತಿ ಉಂಟಾದರೆ, ಅವನ ನಿಯೋಜಕನು,-

(ಎ) ನಿರ್ವಾಹಕನ ಮರಣದ ಸಂದರ್ಭದಲ್ಲಿ , ಅವನ ಕುಟುಂಬಕ್ಕೆ; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ , ಆ ನಿರ್ವಾಹಕನಿಗೆ

- ನಷ್ಟಪರಿಹಾರವನ್ನು ಸಂದಾಯಮಾಡಲು ಹೊಣೆಗಾರನಾಗಿರತಕ್ಕುದು:

ಪರಂತು, ನಿರ್ವಾಹಕನು ಕುಟುಂಬವನ್ನು ಹೊಂದಿಲ್ಲದಿರುವಲ್ಲಿ, ನಷ್ಟ ಪರಿಹಾರವನ್ನು, ಈ ಬಗ್ಗೆ ನಿರ್ವಾಹಕನು ಲಿಖಿತದಲ್ಲಿ ನಾಮನಿರ್ದೇಶನ ಮಾಡಿರುವ ಹಾಗೂ ನಿಯಂತ್ರಕನಿಗೆ ತಿಳಿಯಪಡಿಸಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯಮಾಡತಕ್ಕುದು:

ಮತ್ತೂ ಪರಂತು, ನಿಯೋಜಕನು-

(i) ಮೂರು ದಿವಸಗಳನ್ನು ಮೀರಿದ ಅವಧಿಯವರೆಗೆ ನಿರ್ವಾಹಕನನ್ನು ಪೂರ್ಣವಾಗಿ ಅಥವಾ ಭಾಗಶಃ ಅಶಕ್ತಗೊಳಿಸದಿರುವಂಥ ಯಾವುದೇ ಕ್ಷತಿಯ ಸಂಬಂಧದಲ್ಲಿ; ಅಥವಾ

(ii) (ಎ) ನಿರ್ವಾಹಕನು ಆಕಸ್ಮಿಕದ ಸಮಯದಲ್ಲಿ ಯಾವುದೇ ಮಾದಕ ವಸ್ತು ಅಥವಾ ಔಷಧ ಪ್ರಭಾವಕ್ಕೆ ಒಳಗಾಗಿದ್ದನೆಂಬುದಕ್ಕೆ; ಅಥವಾ

(ಬಿ) ಕೆಲಸಗಾರನು, ನಿರ್ವಾಹಕನ ರಕ್ಷಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಯಂತ್ರಕ್ಕೆ ಅಳವಡಿಸಿದಂಥ ಯಾವುದೇ ರಕ್ಷಣೋಪಾಯ ಅಥವಾ ಇತರ ಸಾಧನವೆಂದು ಗೊತ್ತಿದ್ದು ಅದನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಿದ್ದನೆಂಬುದಕ್ಕೆ ನೇರವಾಗಿ ಆರೋಪಿಸಬಹುದಾದ ಆಕಸ್ಮಿಕದಿಂದ ಮರಣವನ್ನುಂಟುಮಾಡದಂಥ ಯಾವುದೇ ಕ್ಷತಿಯ ಸಂಬಂಧದಲ್ಲಿ

- ಹೊಣೆಗಾರನಾಗತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗನ್ನು, ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923ರ (1923ರ 3) ಉಪಬಂಧಗಳಿಗೆ ಅನುಸಾರವಾಗಿ ನಿರ್ವಾಹಕನು, ಆ ಅಧಿನಿಯಮದ ಅರ್ಥದಲ್ಲಿ ಕಾರ್ಮಿಕನಾಗಿದ್ದರೆ ಹೇಗೋ ಹಾಗೆ, ನಿರ್ಧರಿಸತಕ್ಕುದು ಮತ್ತು ಸಂದಾಯ ಮಾಡತಕ್ಕುದು, ಮತ್ತು ಈ ಉದ್ದೇಶಕ್ಕಾಗಿ, ಸದರಿ ಅಧಿನಿಯಮದ ಉಪಬಂಧಗಳು ಆ ಅಧಿನಿಯಮದ ಅರ್ಥದಲ್ಲಿ ಕಾರ್ಮಿಕನಿಗೆ ಅನ್ವಯವಾಗುವ ಹಾಗೆ ಅವನಿಗೆ ಅನ್ವಯವಾಗತಕ್ಕುದು.

23. ಆಕಸ್ಮಿಕದ ನೋಟೀಸು:- (1) ಒಬ್ಬ ನಿರ್ವಾಹಕನಿಗೆ, ಅವನ ನಿಯೋಜನೆಯ ಅವಧಿಯಲ್ಲಿ, ಮರಣ ಅಥವಾ ಯಾವುದೇ ಅಂಗಚ್ಛೇದ ಅಥವಾ ಯಾವುದೇ ಇತರ ದೈಹಿತ ಕ್ಷತಿ ಉಂಟಾಗಿರುವಲ್ಲಿ, ಅಂಥ ಮರಣ, ಅಂಗಚ್ಛೇದ ಅಥವಾ ಕ್ಷತಿಯ ಬಗ್ಗೆ ನೋಟೀಸನ್ನು, ಯಾವ ದಿನಾಂಕದಂದು ಅಂಥ ಮರಣ, ಅಂಗಚ್ಛೇದ ಅಥವಾ ಕ್ಷತಿಯುಂಟಾಗಿತ್ತೋ ಆ ದಿನಾಂಕದಿಂದ ಮೂರು ದಿವಸಗಳೊಳಗೆ ನಿಯೋಜಕನಿಗೆ ಕೊಡತಕ್ಕುದು.

(2) ಅಂಥ ನೋಟೀಸನ್ನು ನಿರ್ವಾಹಕನು ಜೀವಂತವಾಗಿದ್ದರೆ ಅವನು, ಅಥವಾ ಅವನ ಕುಟುಂಬದ ಯಾವನೇ ಸದಸ್ಯನು ಅಥವಾ ಅವನಲ್ಲಿ ಹಿತಾಸಕ್ತಿಯುಳ್ಳ ಯಾವನೇ ಇತರ ವ್ಯಕ್ತಿಯು ಕೊಡತಕ್ಕುದು.

(3) (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಕೊಡಲು ತಪ್ಪಿದರೆ, ಆ ಕಾರಣದಿಂದ, ಸಂದರ್ಭಾನುಸಾರ, ನಿರ್ವಾಹಕನಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ, ಈ ಅಧಿನಿಯಮದ ಮೇರೆಗೆ ಸಂದಾಯಮಾಡತಕ್ಕ ನಷ್ಟಪರಿಹಾರವನ್ನು ಪಡೆಯಲು ಇರುವ ಹಕ್ಕನ್ನು ಅವರು ಕಳೆದುಕೊಳ್ಳತಕ್ಕುದಲ್ಲ.

24. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳುವ ಬಗ್ಗೆ ನಿಯೋಜಕನ ಕರ್ತವ್ಯ:- ಪ್ರತಿಯೊಬ್ಬ ನಿಯೋಜಕನು, ಈ ಅಧಿನಿಯಮದ ಪ್ರಾರಂಭದ ತರುವಾಯ ಸಾಧ್ಯವಾದಷ್ಟು ಬೇಗನೆ, ಒಂದು ಅಪಾಯಕರ ಯಂತ್ರದ ಯಾವನೇ ನಿರ್ವಾಹಕನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡಲು 22ನೇ ಪ್ರಕರಣದ (1)ನೇ ಉಪ-ಪ್ರಕರಣದಿಂದ ಉಂಟಾಗುವ ಯಾವುದೇ ಹೊಣೆಗಾರಿಕೆಯ ಪ್ರತಿಯಾಗಿ ತನ್ನ ರಕ್ಷಣೆಗೆ ವಿಮಾ ಕರಾರುಗಳನ್ನು ಒದಗಿಸುವ ಒಂದು ಅಥವಾ ಹೆಚ್ಚಿನ ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳತಕ್ಕುದು ಮತ್ತು ಅಂಥ ವಿಮೆಯ ಕರಾರು ನಿರ್ವಾಹಕನಿಗೆ ಅಥವಾ ಅವನ ಮರಣದ ಸಂದರ್ಭದಲ್ಲಿ ಅವನ ಕುಟುಂಬದ ಸದಸ್ಯರಿಗೆ ಅಥವಾ ಅವನು ಕುಟುಂಬವನ್ನು ಹೊಂದಿಲ್ಲದಿದ್ದರೆ, ಅವನ ನಾಮನಿರ್ದೇಶಿತನಿಗೆ ವರ್ಷಾಶನಗಳನ್ನು ಸಂದಾಯಮಾಡಲು ವ್ಯವಸ್ಥೆ ಮಾಡಬಹುದು.

(2) ಪ್ರತಿಯೊಬ್ಬ ನಿಯೋಜಕನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿಮಾ ಪಾಲಿಸಿಯನ್ನು, ಅದರ ವಿಧಿಮಾನ್ಯತೆಯ ಅವಧಿಯು ಮುಗಿಯುವುದಕ್ಕೆ ಮುಂಚೆ, ಯಾವುದೇ ಅಪಾಯಕರ ಯಂತ್ರವನ್ನು ನಡೆಸಲು ಯಾವನೇ ವ್ಯಕ್ತಿಯನ್ನು ಅವನು ನಿಯೋಜಿಸಿಕೊಂಡಿರುವ ಆ ಅವಧಿಯಾದ್ಯಂತ ಆ ವಿಮಾಪಾಲಿಸಿಯು, ಜಾರಿಯಲ್ಲಿರುವ ಹಾಗೆ ಕಾಲಕಾಲಕ್ಕೆ ನವೀಕರಿಸಿಕೊಳ್ಳತಕ್ಕುದು.

25. ವಿಮಾ ಪಾಲಿಸಿಗಳನ್ನು ತೆಗೆದುಕೊಳ್ಳಲು ನಿಯೋಜಕನು ಲೋಪಿಸುವುದು ಅಥವಾ ತಪ್ಪಿರುವುದು:- (1) 24ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ನಿಯೋಜಕನು ಲೋಪಿಸಿರುವಲ್ಲಿ ಅಥವಾ ತಪ್ಪಿರುವಲ್ಲಿ, ಅಥವಾ ನಿಯೋಜಕನು ಅಂಥ ವಿಮಾ ಪಾಲಿಸಿಯನ್ನು ಜಾರಿಯಲ್ಲಿ ಇಡಲು ಅಥವಾ ಸಂದರ್ಭಾನುಸಾರ ನಿರ್ವಾಹಕನಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ, ಅಥವಾ ನಾಮನಿರ್ದೇಶಿತನಿಗೆ ಸಂದಾಯಮಾಡತಕ್ಕ ನಷ್ಟಪರಿಹಾರದ ಯಾವುದೇ ಮೊಬಲಗನ್ನು ವಿಮಾ ಕರ್ತನಿಂದ ಪಡೆದುಕೊಳ್ಳಲು ಲೋಪಿಸಿರುವ, ತಪ್ಪಿರುವ ಅಥವಾ ಅಸಮರ್ಥನಾಗಿರುವ ಸಂದರ್ಭದಲ್ಲಿ, ನಿಯೋಜಕನು ತನ್ನ ನಿಧಿಗಳಿಂದ, ಸಂದರ್ಭಾನುಸಾರ, ನಿರ್ವಾಹಕನಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ ಅಥವಾ ಅವನ ನಾಮನಿರ್ದೇಶಿತನಿಗೆ, ನಿರ್ವಾಹಕನು ಯಾವ ದಿನಾಂಕದಂದು ಮರಣಹೊಂದಿದನೋ ಅಥವಾ ಅಂಗಚ್ಛೇದ ಅಥವಾ ಇತರ ದೈಹಿಕ ಕ್ಷತಿಯನ್ನು ಅನುಭವಿಸಿದನೋ ಆ ದಿನಾಂಕದ ತರುವಾಯ ಆದಷ್ಟು ಬೇಗನೆ, ಆದರೆ ಆ ದಿನಾಂಕದಿಂದ ಮೂವತ್ತು ದಿನಗಳು ಮೀರದ ಹಾಗೆ ನಷ್ಟ ಪರಿಹಾರದ ಸಂದಾಯವನ್ನು ಮಾಡತಕ್ಕುದು ಮತ್ತು ಅಂಥ ಸಂದಾಯದ ತರುವಾಯ ನಿಯೋಜಕನು, ನಿರ್ವಾಹಕನಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ ಮಾಡತಕ್ಕ ನಷ್ಟ ಪರಿಹಾರದ ಸಂದಾಯದ ಹೊಣೆಗಾರಿಕೆಯಿಂದ ಪೂರ್ಣತಃ ಮುಕ್ತನಾಗಿರತಕ್ಕುದು.

(2) (1)ನೇ ಉಪ್ರ-ಪ್ರಕರಣದಲ್ಲಿ ಉಲ್ಲೇಖಿಸಲಾದ ಹೊಣೆಗಾರಿಕೆಯ ವಿಮೋಚನೆಯು ನಿಯೋಜಕನು ತೆಗೆದುಕೊಂಡ ಅಥವಾ ನವೀಕರಿಸಿದ ವಿಮಾ ಪಾಲಿಸಿಯ ಮೇರೆಗೆ ಅವನಿಗೆ ಸಲ್ಲತಕ್ಕ ಸಂದಾಯವನ್ನು ವಿಮಾಕರ್ತನಿಂದ ಪಡೆಯಲು ಅವನು ಹೊಂದಿರುವ ಹಕ್ಕನ್ನು ಕಸಿದುಕೊಳ್ಳತಕ್ಕುದಲ್ಲ ಅಥವಾ ಮೊಟಕುಗೊಳಿಸತಕ್ಕುದಲ್ಲ.

## ಅಧ್ಯಾಯ - VI

### ಪರಿವೀಕ್ಷಣೆ, ಶೋಧನೆ ಮತ್ತು ಅಭಿಗ್ರಹಣ

26. ಮರಣ ಅಥವಾ ಕ್ಷತಿ ಉಂಟುಮಾಡುವ ಯಂತ್ರದ ಪರೀಕ್ಷೆ:- (1) ನಿಯೋಜಕನು, 23ನೇ ಪ್ರಕರಣದ ಮೇರೆಗಿನ ನೋಟೀಸು ತಲುಪಿದ ಮೇಲೆ ಆಗಲಿ ಅಥವಾ ಬೇರೆ ರೀತಿಯಲ್ಲಾಗಲಿ ಯಾವುದೇ ಅಪಾಯಕರ ಯಂತ್ರದ ಚಾಲನೆಯ ಅವಧಿಯಲ್ಲಿ ನಿರ್ವಾಹಕನು ಮರಣಹೊಂದಿದನೆಂದು ಅಥವಾ ಅವನಿಗೆ ಯಾವುದೇ ಅಂಗಚ್ಛೇದ ಅಥವಾ ಇತರ ದೈಹಿಕ ಕ್ಷತಿಯು ಉಂಟಾಗಿದೆ ಎಂದು ತಿಳಿದುಕೊಂಡ ತಕ್ಷಣವೇ ಅವನು ಅಂಥ ಮರಣ ಅಥವಾ ಕ್ಷತಿಯ ಬಗ್ಗೆ ಪರಿವೀಕ್ಷಕನಿಗೆ ನೋಟೀಸು ಕೊಡತಕ್ಕುದು.

(2) ಪರಿವೀಕ್ಷಕನು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸು ತಲುಪಿದ ಮೇಲಾಗಲಿ ಅಥವಾ ಅನ್ಯಥಾ ಯಾವುದೇ ಮರಣ ಅಥವಾ ಕ್ಷತಿಯ ಬಗ್ಗೆ ತಿಳಿದಕೂಡಲೇ, ಅವನು ಸಾಧ್ಯವಾದಷ್ಟು ಬೇಗನೆ, ಯಾವ ಅಪಾಯಕರ ಯಂತ್ರದಿಂದ ಅಂಥ ಮರಣ, ಅಂಗಚ್ಛೇದ ಅಥವಾ ಇತರ ದೈಹಿಕ ಕ್ಷತಿಯು ಉಂಟಾಯಿತೋ ಆ ಯಂತ್ರವು ಇರುವ ಆವರಣವನ್ನು ಪ್ರವೇಶಿಸತಕ್ಕುದು ಮತ್ತು ಆ ಯಂತ್ರವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಿದ ಮಾನಕಕ್ಕೆ ಅನುಗುಣವಾಗಿದೆಯೇ ಇಲ್ಲವೆ ಮತ್ತು ನಿಯಮಿಸಿದ ಎಲ್ಲಾ ಸುರಕ್ಷಾ ಸಾಧನಗಳನ್ನು ಒಳಗೊಂಡಿದೆಯೇ ಇಲ್ಲವೆ ಎಂಬುದನ್ನು ಪತ್ತೆ ಹಚ್ಚುವ ದೃಷ್ಟಿಯಿಂದ ಆ ಯಂತ್ರವನ್ನು ಪರೀಕ್ಷಿಸತಕ್ಕುದು ಮತ್ತು ಅಂಥ ಪರೀಕ್ಷೆಯ ತರುವಾಯ ಅವನು, ಆ ಯಂತ್ರವು ಅಸುರಕ್ಷಿತವೆಂದು ಅಭಿಪ್ರಾಯಪಡುವಲ್ಲಿ, ಆದೇಶದ ಮೂಲಕ ಆ ಯಂತ್ರವನ್ನು ತಾನು ಸುರಕ್ಷಿತವಾಗಿರುವುದಾಗಿ ಪ್ರಮಾಣೀಕರಿಸುವ ತನಕ ಅಂಥ ಯಂತ್ರದ ಉಪಯೋಗವನ್ನು ನಿಷೇಧಿಸತಕ್ಕುದು.

(3) ಯಾವುದೇ ಯಂತ್ರವನ್ನು, (2)ನೇ ಉಪ-ಪ್ರಕರಣದ ಮೇರೆಗೆ ಮಾಡಲಾದ ನಿಷೇಧಾಜ್ಞೆಯು ಜಾರಿಯಲ್ಲಿರುವ ಅವಧಿಯಲ್ಲಿ ಚಾಲನೆ ಮಾಡತಕ್ಕುದಲ್ಲ.

27. ದಾಖಲೆಗಳು, ಇತ್ಯಾದಿಗಳ ಪರಿವೀಕ್ಷಣೆ:- ಆ ಅಧಿನಿಯಮದ ಮೇರೆಗೆ ನಿರ್ವಹಿಸಿದ ಪ್ರತಿಯೊಂದು ರಿಜಿಸ್ಟರು, ದಾಖಲೆ ಮತ್ತು ಲೆಕ್ಕಪತ್ರಗಳು ಮತ್ತು ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಪ್ರತಿಯೊಂದು ಲೈಸನ್ಸು ಪರಿವೀಕ್ಷಕನ ಪರಿವೀಕ್ಷಣೆಗೆ ಮುಕ್ತವಾಗಿರತಕ್ಕುದು.

28. ಪ್ರವೇಶಿಸುವ ಮತ್ತು ಶೋಧಿಸುವ ಅಧಿಕಾರ:- ನಿಯಂತ್ರಕನಿಂದ ಈ ಬಗ್ಗೆ ಅಧಿಕೃತನಾದ ಪರಿವೀಕ್ಷಕನು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಲಾಗಿದೆ ಅಥವಾ ಉಲ್ಲಂಘಿಸಲಾಗುತ್ತಿದೆ ಅಥವಾ ಉಲ್ಲಂಘಿಸುವ ಸಂಭವವಿದೆಯೆಂದು ನಂಬಲು ಅವನಿಗೆ ಯಾವುದೇ ಕಾರಣವಿದ್ದಲ್ಲಿ, ದಿವಸದ ಯಾವುದೇ ಯುಕ್ತ ಸಮಯದಲ್ಲಿ ಅವನ್ನು ಯಾವುದೇ ಅಪಾಯಕರ ಯಂತ್ರವು ಚಾಲನೆಯಲ್ಲಿರುವ ಯಾವುದೇ ಆವರಣವನ್ನು ಪ್ರವೇಶಿಸಿ ಶೋಧಿಸಬಹುದು.

29. ಅಭಿಗ್ರಹಣದ ಅಧಿಕಾರ:- ಪರಿವೀಕ್ಷಕನಿಗೆ, ಯಾವುದೇ ಅಪಾಯಕರ ಯಂತ್ರವು ಎಲ್ಲಾ ವಿಧದಲ್ಲೂ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳನ್ನು ಪಾಲಿಸದೆ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಚಾಲನೆಯಲ್ಲಿದೆ ಎಂದು ಮನದಟ್ಟು ಆದಾಗಲೆಲ್ಲ, ಅವನು ಅಂಥ ಅಪಾಯಕರ ಯಂತ್ರವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಮತ್ತು ರಿಜಿಸ್ಟರುಗಳನ್ನು ಅಭಿಗ್ರಹಿಸಬಹುದು.

30. ಶೋಧನೆ ಮತ್ತು ಅಭಿಗ್ರಹಣವನ್ನು ದಂಡಪ್ರಕ್ರಿಯಾ ಸಂಹಿತೆ, 1973ರ ಅನುಸಾರವಾಗಿ ಮಾಡತಕ್ಕುದು:- ಈ ಅಧಿನಿಯಮದ ಮೇರೆಗೆ ಮಾಡುವ ಪ್ರತಿಯೊಂದು ಶೋಧನೆ ಮತ್ತು ಅಭಿಗ್ರಹಣವನ್ನು, ದಂಡಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳಿನುಸಾರವಾಗಿ ಮಾಡತಕ್ಕುದು.

## ಅಧ್ಯಾಯ - VII

### ಅಪರಾಧಗಳು ಮತ್ತು ಅವುಗಳ ಅಧಿವಿಚಾರಣೆ

31. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ:- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ಆದೇಶದ ಉಪಬಂಧಗಳನ್ನು ಉಲ್ಲಂಘಿಸಿ-

(ಎ) ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ವಿಧಿಮಾನ್ಯ ಲೈಸೆನ್ಸು ಇಲ್ಲದೆ ತಯಾರಕನಾಗಿ ಅಥವಾ ವ್ಯಾಪಾರಿಯಾಗಿ ಯಾವುದೇ ಅಪಾಯಕಾರಿ ಯಂತ್ರವನ್ನು ತಯಾರಿಸುವ ಅಥವಾ ವ್ಯವಹಾರವನ್ನು ನಡೆಸುವ;

(ಬಿ) ಯಾವುದೇ ಅಪಾಯಕರ ಯಂತ್ರದ ಚಾಲನೆಯಲ್ಲಿ ಚಾಲಕನನ್ನು ನಿಯೋಜಿಸಿಕೊಳ್ಳುವ;

(ಸಿ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಲಾದ ಮಾನಕಗಳಿಗನುಗುಣವಾಗಿಲ್ಲದಿರುವ ಅಪಾಯಕರ ಯಂತ್ರವನ್ನು ಯಾವನೇ ವ್ಯಕ್ತಿಯು ಚಾಲನೆ ಮಾಡುವಂತೆ ಮಾಡುವ;

(ಡಿ) ನಿಯಮಿಸಲಾದ ಮಾರ್ಪಾಡುಗಳನ್ನು ಮಾಡದೆಯೇ, 21ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಅಪಾಯಕರ ಯಂತ್ರವನ್ನು ಯಾವನೇ ವ್ಯಕ್ತಿಯು ಚಾಲನೆ ಮಾಡುವಂತೆ ಮಾಡುವ;

(ಇ) 24ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಅಥವಾ ನವೀಕರಿಸಲು ಲೋಪಿಸುವ;

(ಎಫ್) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿಲ್ಲದ ಯಾವುದೇ ಅಪಾಯಕರ ಯಂತ್ರವನ್ನು ಮಾರಾಟಮಾಡುವ ಅಥವಾ ಅನ್ಯಥಾ ವರ್ಗಾವಣೆ ಮಾಡುವ;

(ಜಿ) 26ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಾಡಲಾದ ನಿಷೇಧಾಜ್ಞೆಯು ಜಾರಿಯಲ್ಲಿರುವ ಅವಧಿಯಲ್ಲಿ ಯಾವುದೇ ಅಪಾಯಕರ ಯಂತ್ರವನ್ನು ಚಾಲನೆ ಮಾಡುವ ಅಥವಾ ಯಾವನೇ ವ್ಯಕ್ತಿಯು ಚಾಲನೆ ಮಾಡುವಂತೆ ಮಾಡುವ; ಅಥವಾ

(ಹೆಚ್) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮ ಅಥವಾ ಆದೇಶದ ಯಾವುದೇ ಇತರ ಉಪಬಂಧವನ್ನು ಉಲ್ಲಂಘಿಸುವ

- ಯಾರೇ ಆಗಲಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ, ಮೂರು ತಿಂಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಾರಾವಾಸದಿಂದ ಮತ್ತು ಐದುನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದರೆ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿಲ್ಲದ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕುದು.

32. ಕಂಪನಿಗಳಿಂದ ಅಪರಾಧ:- (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಈ ಕಂಪನಿಯ ಆಡಳಿತವನ್ನು ಹೊಂದಿದ್ದು ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಹಾಗೂ ಆ ಕಂಪನಿಯನ್ನು ಸಹ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕುದು ಹಾಗೂ ಅದಕ್ಕನುಸಾರವಾಗಿ ದಂಡಿತನಾಗತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದೂ, ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾವನೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಯಾಗುವಂತೆ ಮಾಡತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ, ಅಥವಾ ಕಂಪನಿಯ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಸಲಾಯಿತೆಂದು ರುಜುವಾತಾಗಿರುವಲ್ಲಿ ಅಥವಾ ಆ ಅಪರಾಧವು ಅವನ ಯಾವುದೇ ನಿರ್ಲಕ್ಷ್ಯದಿಂದಾಗಿ ಸಂಭವಿಸಿತೆಂದು ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ-

(ಎ) 'ಕಂಪನಿ' ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ ಫರ್ಮಿನ ಒಬ್ಬ ಪಾಲುದಾರ.

33. ಅಪರಾಧಗಳ ಸಂಜ್ಞಾನ ಮತ್ತು ಅಪರಾಧಗಳ ಅಧಿವಿಚಾರಣೆ:- (1) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞಾನವನ್ನು, ನಿಯಂತ್ರಕನು ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಬರಹದಲ್ಲಿ ಸಲ್ಲಿಸಿದ ದೂರಿನ ಮೇಲಲ್ಲದೆ ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕುದಲ್ಲ.

(2) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವನ್ನು ಮ್ಯಾಜಿಸ್ಟ್ರೇಟನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಬಹುದು.

## ಅಧ್ಯಾಯ - VIII

ಸಂಕೀರ್ಣ

34. ಅಪೀಲುಗಳು:- (1)ಈ ಅಧಿನಿಯಮದ ಮೇರೆಗೆ ಲೈಸನ್ಸು ನೀಡುವ ಅಥವಾ ಅದನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಅಪಾಯಕರ ಯಂತ್ರವನ್ನು ನೋಂದಾಯಿಸಲು ನಿರಾಕರಿಸುವ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆದೇಶದ ವಿರುದ್ಧವಾಗಿ ರಾಜ್ಯಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅಪೀಲನ್ನು ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಸಲ್ಲಿಸತಕ್ಕದು:

ಪರಂತು, ರಾಜ್ಯ ಸರ್ಕಾರವು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ಅಪೀಲುದಾರನು ಪ್ರತಿಬಂಧಿತನಾಗಿದ್ದನೆಂದು ಮನದಟ್ಟು ಮಾಡಿಕೊಂಡರೆ, ಮೂವತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು.

35. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ:- ರಾಜ್ಯಸರ್ಕಾರ, ನಿಯಂತ್ರಕ ಅಥವಾ ಈ ಅಧಿನಿಯಮದ ಮೇರೆಗಿನ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ನಿಯಂತ್ರಕನು ಅಧಿಕೃತಗೊಳಿಸಿದ ಯಾವನೇ ಪರಿಶೀಲಕ ಅಥವಾ ಯಾವನೇ ಇತರ ವ್ಯಕ್ತಿಯ ವಿರುದ್ಧ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಯಾವುದೇ ಕ್ರಮದ ಬಗ್ಗೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದಲ್ಲ.

36. ಕೇಂದ್ರಸರ್ಕಾರದ ನಿಯಮಗಳ ರಚನಾಧಿಕಾರ:- (1) ಕೇಂದ್ರಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 9ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳು, ಮತ್ತು 13 ಮತ್ತು 21ನೇ ಪ್ರಕರಣಗಳ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಪ್ರತಿಯೊಂದು ಅಧಿಸೂಚನೆಯನ್ನು, ಮತ್ತು (1)ನೇ ಉಪಪ್ರಕರಣದ ಮೇರೆಗೆ ಅದು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇರಿಸತಕ್ಕದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ಅಧಿಸೂಚನೆ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆ ಅಥವಾ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ಅಧಿಸೂಚನೆ ಅಥವಾ ಆ ನಿಯಮವು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ವಿಧಿಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದು.

37. ನಿಯಮಗಳನ್ನು ರಚಿಸಲು ರಾಜ್ಯಸರ್ಕಾರದ ಅಧಿಕಾರ:- (1)ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ 36ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂಥವುಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:-

(ಎ) 9ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂಥವುಗಳನ್ನು ಹೊರತುಪಡಿಸಿ ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ವಿಷಯಗಳು;

(ಬಿ) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಪರಿಮಿತಿಗಳೊಳಗೆ ಆ ಪ್ರಕರಣದ ಮೇರೆಗೆ ಲೈಸನ್ಸುಗಳ ನೀಡಿಕೆ ಮತ್ತು ನವೀಕರಣದ ಮತ್ತು 19ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ವ್ಯಾಪಾರಿಗಳ ನೋಂದಣಿಯ ಫೀಜುಗಳು (ವಿಳಂಬ ಫೀಜುಗಳೂ ಸೇರಿ);

(ಸಿ) 15ನೇ ಪ್ರಕರಣದ ಮೂಲಕ ಅಗತ್ಯಪಡಿಸಿದ ಸೂಚನೆಗಳ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಬೇಕಾದ ಎಚ್ಚರಿಕೆಗಳು;

(ಡಿ) 18ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬರಲು ಅಗತ್ಯಪಡಿಸಲಾಗಿರುವ ರಿಜಿಸ್ಟರುಗಳು, ದಾಖಲೆಗಳು ಮತ್ತು ಲೆಕ್ಕಪತ್ರಗಳು;

(ಇ) ಅಪಾಯಕರ ಯಂತ್ರದಿಂದ ಕ್ಷತಿಗೊಂಡ ಯಾವನೇ ನಿರ್ವಾಹಕನಿಗೆ ಪ್ರಥಮ ಚಿಕಿತ್ಸೆಯನ್ನು ನೀಡುವುದಕ್ಕಾಗಿ 20ನೇ ಪ್ರಕರಣದ ಮೇರೆಗೆ ಮಾಡಲು ಅಗತ್ಯಪಡಿಸಿದ ಏರ್ಪಾಡುಗಳು; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಾಜ್ಯಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ರಾಜ್ಯವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಒಂದು ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಇರಿಸತಕ್ಕುದು.

38. ನಿರ್ದೇಶನಗಳನ್ನು ನೀಡುವ ಅಧಿಕಾರ:- ಕೇಂದ್ರ ಸರ್ಕಾರವು, ಈ ಅಧಿನಿಯಮದ ಯಾವುವೇ ಉಪಬಂಧವನ್ನು ಅಥವಾ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶವನ್ನು ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಯಾವುದೇ ರಾಜ್ಯಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

* * *

**ಮುದ್ರಕರು :** ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ. p-707